KANNADA

# *The Spoken Word*

## ಪ್ರತೀ ಯುಗದಲ್ಲಿರುವ ಪವಿತ್ರಾತ್ಮನು

## THE HOLY SPIRIT IN EVERY AGE

*WILLIAM MARRION BRANHAM*

# ಪ್ರತೀ ಯುಗದಲ್ಲಿರುವ ಪವಿತ್ರಾತ್ಮನು
# THE HOLY SPIRIT IN EVERY AGE

**ಪ್ರಕಟನೆ 2:11,-** ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ. ಈ ವಾಕ್ಯವನ್ನು ಉಲ್ಲೇಕಿಸದಿರುವ ಒಂದು ಸಭೆಯೂ ಅಲ್ಲಿಲ್ಲ. ಪ್ರತೀಯೊಂದು ಯುಗವು, ಆ ಪ್ರತೀ ಯುಗದ ಜನರಿಗೆ ಅದೇ ಎಚ್ಚರಿಕೆಯನ್ನು ಕೊಡುತ್ತದೆ. ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ, ಆದರೆ ಎಲ್ಲಾ ಜನರಿಗೆ, ಆತ್ಮನು ಬೇರೆ ಬೇರೆ ಯುಗಗಳಿಗೆ ಹೇಳುವಂಥಾದ್ದನ್ನು ಕೇಳಲು ಅದು ಪೂರ್ಣವಾಗಿ ಅಸಾಧ್ಯವಾಗಿದೆ. 1ನೇ ಕೊರಿಂಥ 2:6-16,- *ಆದರೂ ಪ್ರವೀಣರಲ್ಲಿ ಜ್ಞಾನವನ್ನೇ ಹೇಳುತ್ತೇವೆ. ಅದು ಇಹಲೋಕದ ಜ್ಞಾನವಲ್ಲ. ಇಲ್ಲದೆ ಹೋಗುವ ಇಹಲೋಕಾಧಿಕಾರಿಗಳ ಜ್ಞಾನವೂ ಅಲ್ಲ. ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥವನ್ನು ತಿಳಿಸುವಲ್ಲಿ ದೇವರ ಜ್ಞಾನವನ್ನೇ ಹೇಳುತ್ತೇವೆ. ಅದು ಯಾವದಾಂದರೆ ದೇವರು ನಮ್ಮ ಮಹಿಮೆಗಾಗಿ ಲೋಕೋತ್ಪತ್ತಿಗಿಂತ ಮೊದಲೇ ನೇಮಿಸಿ ಇದುವರೆಗೆ ಮರೆ ಮಾಡಿದ ಜ್ಞಾನವೇ. ಇದನ್ನು ಇಹಲೋಕಾಧಿ ಕಾರಿಗಳಲ್ಲಿ ಯಾರೂ ಅರಿಯಲಿಲ್ಲ. ಅರಿತಿದ್ದರೆ ಅವರು ಮಹಿಮೆಯುಳ್ಳ ಕರ್ತನನ್ನು ಶಿಲುಬೆಗೆ ಹಾಕಿಸುತ್ತಿರಲಿಲ್ಲ. ಆದರೆ ಬರೆದಿರುವ ಪ್ರಕಾರ- ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದ್ದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ. ನಮಗಾದರೂ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯಗಳನ್ನು ಕೂಡಾ ಪರಿಶೋಧಿಸುವವನಾಗಿದ್ದಾನೆ. ಮನುಷ್ಯನ ಒಳಗಿನ ಆಲೋಚನೆಗಳು ಅವನಲ್ಲಿರುವ ಜೀವಾತ್ಮಕ್ಕೆ ಹೊರತು ಮತ್ತಾರಿಗೆ ತಿಳಿಯುವದು? ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವದಿಲ್ಲ. ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು*

ನಮಗೆ ದಯೆಪಾಲಿಸಿರುವ ಕೃಪಾವರಗಳನ್ನು ತಿಳಿದುಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು. ಇವುಗಳನ್ನು ಮನುಷ್ಯ ಜ್ಞಾನವು ಕಲಿಸಿದ ಮಾತುಗಳಿಂದ ಹೇಳದೇ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ ಹೇಳಿ ಆತ್ಮ ಸಂಬಂಧವಾದವುಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ ವಿವರಿಸುತ್ತೇನೆ. ಪ್ರಾಕೃತ ಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ. ಅವು ಅವನಿಗೆ ಹುಚ್ಚು ಮಾತಾಗಿ ತೋರುತ್ತವೆ. ಅವು ಆತ್ಮ ವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು. ದೇವರಾತ್ಮನಿಂದ ನಡಿಸಿಕೊಳ್ಳುವವನೋ ಎಲ್ಲವನ್ನು ವಿಚಾರಿಸಿ ತಿಳಿದುಕೊಳ್ಳುತ್ತಾನೆ; ಆದರೆ ಇವನನ್ನು ಯಾವನಾದರೂ ವಿಚಾರಿಸಿ ತಿಳಿದುಕೊಳ್ಳುವದಿಲ್ಲ. ಕರ್ತನ ಮನಸ್ಸನ್ನು ತಿಳಿದುಕೊಂಡು ಆತನಿಗೆ ಉಪದೇಶಿಸುವವನಾರು? ಎಂದು ಬರೆದದೆ ಯಲ್ಲಾ. ನಮಗಾದರೂ ಕ್ರಿಸ್ತನ ಮನಸ್ಸು ದೊರಕಿತು. ಮತ್ತಾಯ 13:13-16,- ನಾನು ಅವರ ಸಂಗಡ ಸಾಮ್ಯರೂಪವಾಗಿ ಮಾತಾಡುವದಕ್ಕೆ ಕಾರಣವೇನೆಂದರೆ ಅವರಿಗೆ ಕಣ್ಣಿದ್ದರೂ ನೋಡುವದಿಲ್ಲ; ಕಿವಿ ಇದ್ದರೂ ಕೇಳುವದಿಲ್ಲ ಮತ್ತು ತಿಳಿದು ಕೊಳ್ಳುವದಿಲ್ಲ. ಯೇಶಾಯನು ಹೇಳಿದ ಪ್ರವಾದನೆಯು ಅವರಲ್ಲಿ ನೆರವೇರುತ್ತದೆ. ಅದೇನೆಂದರೆ - ನೀವು ಕಿವಿ ಇದ್ದು ಕೇಳಿದರೂ ತಿಳಿದುಕೊಳ್ಳುವದೇ ಇಲ್ಲ; ಕಣ್ಣಿದ್ದು ನೋಡಿದರೂ ಕಾಣುವದೇ ಇಲ್ಲ. ಈ ಜನರ ಹೃದಯವು ಕೊಬ್ಬಿತು; ಇವರ ಕಿವಿ ಮಂದವಾಯಿತು; ಇವರು ಕಣ್ಣು ಮುಚ್ಚಿಕೊಂಡಿದ್ದಾರೆ. ತಾವು ಕಣ್ಣಿಂದ ಕಂಡು ಕಿವಿಯಿಂದ ಕೇಳಿ ಹೃದಯದಿಂದ ತಿಳಿದು ನನ್ನ ಕಡೆಗೆ ತಿರುಗಿಕೊಂಡು ನನ್ನಿಂದ ಸ್ವಸ್ಥತೆಯನ್ನು ಹೇಗೂ ಹೊಂದಬಾರದೆಂದು ಮಾಡಿಕೊಂಡಿದ್ದಾರೆ ಎಂಬದು. ಆದರೆ ನಿಮ್ಮ ಕಣ್ಣು ಕಾಣುತ್ತವೆ. ನಿಮ್ಮ ಕಿವಿ ಕೇಳುತ್ತವೆ; ಆದದರಿಂದ ನೀವು ಧನ್ಯರು. ಯೋಹಾನ 8:42-44,- ಯೇಸು ಅವರಿಗೆ- ದೇವರು ನಿಮ್ಮ ತಂದೆಯಾಗಿದ್ದರೆ, ನನ್ನನ್ನು ಪ್ರೀತಿಸುತ್ತಿದ್ದಿರಿ; ಯಾಕಂದರೆ ನಾನು ದೇವರಿಂದಲೇ ಹೊರಟು ಲೋಕಕ್ಕೆ ಬಂದವನಾಗಿದ್ದೇನೆ. ನನ್ನಷ್ಟಕ್ಕೆ ನಾನೇ ಬರಲಿಲ್ಲ; ಆತನೇ ನನ್ನನ್ನು ಕಳುಹಿಸಿದ್ದಾನೆ. ನೀವು ನನ್ನ ಮಾತನ್ನು ಗ್ರಹಿಸದೆ ಇರುವದರ ಕಾರಣವೇನು? ನನ್ನ ಬೋಧನೆಗೆ ಕಿವಿಗೊಡಲಾರದೆ ಇರುವದೇ ಕಾರಣ ಸೈತಾನನು ನಿಮ್ಮ ತಂದೆ; ನೀವು ಆ ತಂದೆಯಿಂದ ಹುಟ್ಟಿದವರಾಗಿದ್ದು ನಿಮ್ಮ ತಂದೆಯ ದುರಿಚ್ಛೆಗಳನ್ನೇ ನಡಿಸಬೇಕೆಂದಿದ್ದೀರಿ. ಅವನು ಆದಿಯಿಂದಲೂ

*ಕೊಲೆಗಾರನಾಗಿದ್ದು ಸತ್ಯದಲ್ಲಿ ನಿಲ್ಲಲಿಲ್ಲ. ಅವನಲ್ಲಿ ಸತ್ಯವು ಇಲ್ಲವೇ ಇಲ್ಲ. ಅವನು ಸುಳ್ಳಾಡುವಾಗ ಸ್ವಭಾವಕ್ಕನುಸಾರವಾಗಿ ಆಡುತ್ತಾನೆ. ಅವನು ಸುಳ್ಳುಗಾರನೂ ಸುಳ್ಳಿಗೆ ಮೂಲ ಪುರುಷನೂ ಆಗಿದ್ದಾನೆ.* ಈ ವಚನದಿಂದ, ಯಾವ ಮನುಷ್ಯನೂ ತನ್ನ ಸ್ವಇಚ್ಛೆಯಿಂದ ದೇವರಿಗೆ ಕಿವಿಗೊಡಲು ಸಾಧ್ಯವಿಲ್ಲವೆಂಬದು ಅತೀ ಸ್ಪಷ್ಟವಾಗುತ್ತದೆ. ಅವನಿಗೆ ದೇವರಿಂದಲೇ ಈ ಶಕ್ತಿಯು ಬರಬೇಕಾಗಿರುತ್ತದೆ. ಮತ್ತಾಯ 16:17,- *ಆದಕ್ಕೆ ಯೇಸು- ಯೋನನ ಮಗನಾದ ಸೀಮೋನನೇ, ನೀನು ಧನ್ಯನು; ಈ ಗುಟ್ಟು ನಿನಗೆ ತಿಳಿಸಿದವನು ನರ ಮನುಷ್ಯನಲ್ಲ. ಪರಲೋಕದಲ್ಲಿರುವ ನನ್ನ ತಂದೆಯೇ ತಿಳಿಸಿದನು.* ಈ ಎಲ್ಲಾ ಶಬ್ದಗಳ ಸಾರಾಂಶದಿಂದ, ಅಲ್ಲಿ ಒಂದೇ ಜನರ ಗುಂಪು ಇದೆ, ಮತ್ತು ಆ ಬಹಳ ವಿಶೇಷವಾದ ಜನರ ಗುಂಪು ಪ್ರತಿ ಯುಗದಲ್ಲಿ ಆತ್ಮನು ಹೇಳುವದನ್ನು ಕೇಳಲು ಶಕ್ತವಾಗಿದೆ, ಎಂದು ನಾವು ನೋಡುತ್ತೇವೆ. ಆ ಒಂದೇ ವಿಶೇಷವಾದ ಗುಂಪು, ಪ್ರತಿಯುಗದ ಪ್ರಕಟನೆಯನ್ನು ಅಂಗೀಕರಿಸುತ್ತದೆ. ಅದು ದೇವರ ಗುಂಪು ಆಗಿದೆ. ಯಾಕಂದರೆ ಅದನ್ನು ಕೇಳಲಾರದ ಗುಂಪು ಅದು ದೇವರ ಗುಂಪಲ್ಲ. (ಯೋಹಾನ 8:42-44) ಆತ್ಮನು ಹೇಳುತ್ತಿರುವದನ್ನು ಕೇಳ ಶಕ್ತವಾದ ಮತ್ತು ಕೇಳುವ ಮತ್ತು ಅದರಲ್ಲಿರುವ ಪ್ರಕಟನೆಯನ್ನು ಅಂಗೀಕರಿಸುವಂಥ ಆ ಗುಂಪು. ಅದು 1 ಕೊರಿಂಥ 2:6-16ರಲ್ಲಿ ಹೇಳಿದಂಥ ಗುಂಪಾಗಿದೆ. ಇವರೇ ದೇವರಾತ್ಮದಿಂದ ತುಂಬಿರುವವರು. ಆದರೆ ದೇವರಿಂದ ಹುಟ್ಟಿದವರು. ಅವರು ಆತನ ಆತ್ಮದಿಂದ ಕರ್ತನಾದ ಯೇಸು ಕ್ರಿಸ್ತನ ದೇಹದೊಳಗೆ ದೀಕ್ಷಾಸ್ನಾನಮಾಡಲ್ಪಟ್ಟಿದ್ದಾರೆ. ಅವರು ಪವಿತ್ರಾತ್ಮನಿಂದ ದೀಕ್ಷಾಸ್ನಾನಮಾಡಲ್ಪಟ್ಟಿದ್ದಾರೆ.

ನಾವು ಈಗಾಗಲೇ ಹೇಳಿದ್ದನ್ನು, ಇನ್ನೂ ಹೆಚ್ಚಾಗಿ ವಿವರಿಸಲು, ಮತ್ತು ಪವಿತ್ರಾತ್ಮನಿಂದ ದೀಕ್ಷಾಸ್ನಾನಮಾಡಿಸಿಕೊಂಡವರು, ಯಾರೆಂಬುದರ ವಿಷಯವಾಗಿ ನಾವು ಮಾತಾಡುತ್ತಿರುವಾಗ, ಒಂದು ವಚನ ಪ್ರಯೋಗವನ್ನು ನಮ್ಮ ಮನಸ್ಸಿನಲ್ಲಿ ತೆಗೆದುಕೊಂಡಿರಲು, ಯೇಸುವು ಯೋಹಾನ 6:45ರಲ್ಲಿ ಏನು ಹೇಳುತ್ತಾನೆಂದು ಕೇಳೋಣ. *ಅವರೆಲ್ಲರೂ ದೇವರಿಂದ ಶಿಕ್ಷಿತರಾಗಿರುವರು ಎಂದು ಪ್ರವಾದಿಗಳ ಗ್ರಂಥದಲ್ಲಿ ಬರೆದದೆ; ತಂದೆಯಿಂದ ಕೇಳಿ ಕಲಿತವರೆಲ್ಲರೂ ನನ್ನ ಬಳಿಗೆ ಬರುತ್ತಾರೆ.* ಆದರೆ ಇದು ಎಲ್ಲಿಂದ ತೆಗೆಯಲ್ಪಟ್ಟಿದೆಯೋ ಆ ವಚನವನ್ನು ಯೇಶಾಯ 54:13ರಲ್ಲಿ ನಾವು ನೋಡೋಣ, ಮತ್ತು ಅದು ಹೀಗೆ ಹೇಳುತ್ತದೆ.- *ನಿನ್ನ ಮಕ್ಕಳೆಲ್ಲರೂ ಯೆಹೋವನಿಂದ ಶಿಕ್ಷಿತರಾಗಿರುವರು, ಅವರಿಗೆ*

*ಅಧಿಕ ಸೂಕ್ಷ್ಮವಾಗುವದು.* ಮತ್ತು ದೇವರಿಗೆ ಸಂಬಂಧ ಪಟ್ಟವರೆಲ್ಲಾ, ದೇವರ ಮಕ್ಕಳಾಗಿರುವರು. ಹೀಗಾಗಿ ಅದು ದೇವರ ನಿಜವಾದ ಮಗುವಾಗಿರುವ ಒಂದು ನಿದರ್ಶನವಾಗಿದೆ. (ಯಾರಲ್ಲಿ ದೇವರಾತ್ಮವು ಬಂದು ಅಂತರ್ಯದಲ್ಲಿ ಜೀವಿಸುತ್ತದೋ ಅವರು) ಅದು ಪುನಃ ಪವಿತ್ರಾತ್ಮನಿಂದ ವಚನದ ಶಿಕ್ಷಣವನ್ನು ಹೊಂದಿದವರೇ ಆಗಿರುವರು.

ಈಗ ಅನ್ಯಭಾಷೆಯು, ಪವಿತ್ರಾತ್ಮದಿಂದ ದೀಕ್ಷಾಸ್ನಾನಮಾಡಿಸಲ್ಪಟ್ಟಿದೆ ಎಂಬ ಒಂದು ನಿದರ್ಶನವಾಗಿ ಯಾಕೆ ಇಲ್ಲವೆಂದು ನೀವು ನೋಡಲು ಪ್ರಾರಂಭಿಸುವಿರಿ. ಯಾವ ಯುಗದಲ್ಲಿಯಾದರೂ ನಾಲಿಗೆಯುಳ್ಳವನು, ಆತ್ಮನು ಹೇಳುತ್ತಿರುವದನ್ನು ಹೇಳಲಿ, ಎಂದು ಹೇಳುವದಿಲ್ಲ. ಅದು, ಅನ್ಯಭಾಷೆ, ಅದರ ಅರ್ಥ ಹೇಳುವಂಥಾದ್ದು ಮತ್ತು ಪ್ರವಾದನೆಗಳು, ಇಂಥವುಗಳು ರುಜುವಾತುಗಳಾಗಿವೆ ಎಂಬದನ್ನು ತೆಗೆದು ಬದಿಗಿಡುತ್ತದೆ. ರುಜುವಾತು ಏನೆಂದರೆ ಆತ್ಮನು ಹೇಳುವದನ್ನು ಕೇಳುವದೇ ಆಗಿದೆ. ಆತ್ಮನು ಮಾತಾಡುತ್ತಿದ್ದಾನೆ. ಹೌದು ಆತ್ಮನು ಶಿಕ್ಷಣ ಕೊಡುತ್ತಿದ್ದಾನೆ. ಆತನು ಬರುವಾಗ ಆತನು ಏನು ಮಾಡುವನೆಂದು ಸ್ಪಷ್ಟವಾಗಿ ಯೇಸುವು ಅದನ್ನೇ ಹೇಳಿದ್ದಾನೆ. ಯೋಹಾನ 14:26,- *ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿ ಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು.* ಮತ್ತು ಕೇವಲ ಅದುವೇ ಸಂಭವಿಸಿದೆ. ಸುವಾರ್ತೆಗಳು ಹಾಗೆಯೇ ಬರೆಯಲ್ಪಟ್ಟಿವೆ. ಪವಿತ್ರಾತ್ಮನಿಂದ ಈ ಜನರು ಯೇಸುವು ಹೇಳಿದಂಥ ಅದೇ ಮಾತುಗಳನ್ನು ತಮ್ಮ ನೆನಪಿಗೆ ತಂದುಕೊಂಡರು. ಈ ಕಾರಣದಿಂದಾಗಿಯೇ ಸುವಾರ್ತೆಗಳು ನಿಷ್ಕೃಷ್ಟವಾಗಿವೆ. ಅವುಗಳು ಸಂಪೂರ್ಣವಾಗಿವೆ. ಆದರೆ ಆತ್ಮನು ಕೇವಲ ಅವುಗಳನ್ನು ಅವರ ನೆನಪಿಗೆ ತಂದದ್ದಷ್ಟೇ ಅಲ್ಲ, ಆದರೆ ಅವರಲ್ಲಿ ಈಗಾಗಲೇ ಇದ್ದ ಸತ್ಯದ ವಿಷಯವಾಗಿ ಆತನು ಅವರಿಗೆ ಇನ್ನೂ ಹೆಚ್ಚಾಗಿ ಕಲಿಸಿದನು. ಪೌಲನು ತನ್ನ ಪ್ರಕಟನೆಗಳನ್ನು ಅದೇ ರೀತಿಯಾಗಿ ಪಡಕೊಂಡನು. ಅದರ ವಿಷಯವಾಗಿ ಅವನು ಹೀಗೆ ಹೇಳಿದನು - *ಸಹೋದರರೇ ನಾನು ಸಾರಿದ ಸುವಾರ್ತೆಯಂತೂ ಮನುಷ್ಯ ಕಲ್ಪನೆಯಲ್ಲವೆಂದು ನಿಮಗೆ ತಿಳಿಯಪಡಿಸುತ್ತೇನೆ. ನಾನು ಅದನ್ನು ಮನುಷ್ಯನಿಂದ ಹೊಂದಲಿಲ್ಲ, ನನಗೆ ಯಾರೂ ಉಪದೇಶಿಸಲಿಲ್ಲ. ಯೇಸು ಕ್ರಿಸ್ತನೇ ಅದನ್ನು ನನಗೆ ಪ್ರಕಟಿಸಿದನು.* ಗಲಾತ್ಯ 1:11-12. ಅವನು ಪವಿತ್ರ ಆತ್ಮನಿಂದಲೇ ಶಿಕ್ಷಣ ಹೊಂದಿದನು.

ಯೇಸುವು ಈ ಲೋಕದಲ್ಲಿದ್ದಾಗ ಒಂದು ದಿನ ಒಬ್ಬ ಪ್ರಾಮುಖ್ಯ ಮನುಷ್ಯನು ಆತನನ್ನು ಭೇಟಿಯಾಗಲು ಬಂದನು. ಈ ಮನುಷ್ಯನು- ರಬ್ಬಿಯೇ, ನೀನು ದೇವರಿಂದ ಕಳುಹಿಸಲ್ಪಟ್ಟ ಗುರುವೆಂದು ನಾವು ತಿಳಿದಿದ್ದೇವೆ ಎಂದು ಹೇಳಿದನು. ಆದರೆ ಯೇಸುವು ಅವನನ್ನು ತಡೆದನು ಎಂದು ನೀವು ಕಂಡುಕೊಳ್ಳುವಿರಿ. ಆತನು ನಿಕೋದೇ ಮನತ್ತ ತಿರುಗಿ, ಅವನಿಗೆ ಹೇಳಿದ ಮಾತನ್ನು ಈ ರೀತಿ ವಿವರಣೆ ಮಾಡಬಹುದು. ನಾನೊಬ್ಬ ಬೋಧಕನಲ್ಲ. ನಾನು ಪಾಪಕ್ಕೋಸ್ಕರ ಯಾಜ್ಞಮಾಡಲ್ಪಡುವ ಕುರಿಯಾಗಿದ್ದೇನೆ. ನನ್ನ ಆತ್ಮದಿಂದ ಪುನರ್ಜನ್ಮವು ಸಾಧ್ಯವಾಗುವಂತೆ ನಾನು ಮಾಡುತ್ತೇನೆ. ಆದರೆ ಅಲ್ಲಿ ಒಬ್ಬಾತ ಬೋಧಕನು ಬರುತ್ತಿದ್ದಾನೆ. ಆತನು ಪವಿತ್ರಾತ್ಮನೇ. ಯೇಸುವು ಈ ಲೋಕದಲ್ಲಿದ್ದಾಗ ಆತನು ಕುರಿಯಾಗಿ ಮತ್ತು ಪ್ರವಾದಿಯಾಗಿ ಬಂದನು. ಆದರೆ ಆತನು ತನ್ನಾತ್ಮದ ಮೂಲಕ ಸಭೆಯ ಮೇಲೆ ಪುನಃ ಬಂದಾಗ ಆತನು ಬೋಧಕನಾದನು.

ಮತ್ತು ಪ್ರತೀ ಯುಗದಲ್ಲಿ ನಾವು ಅದೇ ಸತ್ಯವನ್ನು ಕೇಳುತ್ತಿದ್ದೇವೆ.- ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ. ಆದರೆ ಕೇವಲ ಒಬ್ಬ ಆತ್ಮನಿಂದ ತುಂಬಿಸಲ್ಪಟ್ಟ ಆ ಮನುಷ್ಯನೇ ಆ ಯುಗಕ್ಕೋಸ್ಕರವಿರುವ ಪ್ರಕಟನೆಯನ್ನು ಕೇಳಶಕ್ತನು. ಬೇರೆ ಯಾರಿಗೂ ಸಾಧ್ಯವಿಲ್ಲ. ಇಲ್ಲಯ್ಯಾ. ಅವರು ಹಾಗೆ ಮಾಡಲು ಸಾಧ್ಯವಿಲ್ಲ. 1ನೇ ಕೊರಿಂಥ 2:6-16ರಲ್ಲಿ ಪೌಲನು ಸ್ಪಷ್ಟವಾಗಿ ಅದನ್ನೇ ಹೇಳಿದ್ದಾನೆ.

ಈಗ ಇದು ನಿನ್ನನ್ನು ಆನಂದಿಸುವಂತೆ ಮಾಡಲೇ ಬೇಕು. ಅಲ್ಲಿ ಒಂದು ಬಹಳ ವಿಪರೀತವಾದ ಸಿದ್ಧಾಂತವಿದೆ, ಅದು ಹೆಚ್ಚಾಗಿ ತಪ್ಪು ತಿಳುವಳಿಕೆಯನ್ನುಂಟು ಮಾಡುತ್ತದೆ. ಮತ್ತು ದುಃಖದ ಅನುಭವವನ್ನು ಕೊಡುತ್ತದೆ. ಯಾಕೆಂದರೆ ಪೆಂಟಕೋಸ್ಟ್ ಜನರು ನೀನು ಅನ್ಯಭಾಷೆಯಲ್ಲಿ ಮಾತಾಡಲೇಬೇಕು, ಇಲ್ಲದಿದ್ದರೆ ನೀನು ಪವಿತ್ರಾತ್ಮನಿಂದ ದೀಕ್ಷಾಸ್ನಾನಮಾಡಿಸಿಕೊಳ್ಳಲಿಲ್ಲ ವೆಂದು ಅರ್ಥ, ಎಂದು ಹೇಳುವಾಗ, ಅವರು ಶ್ರೇಷ್ಠ ಜನರಾದ ನೋಕ್ಸ್, ಮೂಡಿ, ಟೇಲರ್, ಗೋಫೋರ್ತ್ ಮತ್ತಿತರರು ಪವಿತ್ರಾತ್ಮವನ್ನು ಹೊಂದಿರಲಿಲ್ಲ, ಅಥವಾ ಅವರೆಲ್ಲರೂ ಗುಪ್ತವಾಗಿ ಅನ್ಯಭಾಷೆಯಲ್ಲಿ ಮಾತಾಡಿದ್ದರು ಮತ್ತು ಏನು ಸಂಭವಿಸುತ್ತದೆಂದು ಅವರು ತಿಳಿದಿರಲಿಲ್ಲ, ಎಂದು ಹೇಳುವವರಾಗಿದ್ದಾರೆ. ಈಗ ಅದು ನಿಜವಲ್ಲ. ಇಲ್ಲಯ್ಯಾ. ಅದು ಒಂದು ದೊಡ್ಡ ತಪ್ಪಾಗಿದೆ. ಪವಿತ್ರಾತ್ಮನಿಂದ

ತುಂಬಿಸಲ್ಪಟ್ಟದ್ದಕ್ಕೆ ಅನ್ಯಭಾಷೆಯು ರುಜುವಾತಲ್ಲ. ಅದು 1ನೇ ಕೊರಿಂಥ 12ರಲ್ಲಿ ಸೂಚಿಸಲ್ಪಟ್ಟ ಒಂಬತ್ತು ವರಗಳ ಪ್ರದರ್ಶನದಲ್ಲಿ ಕೇವಲ ಒಂದಾಗಿದೆಯಷ್ಟೇ. ನೀನು ಅನ್ಯಭಾಷೆ ಮಾತಾಡುತ್ತಾ ಪವಿತ್ರಾತ್ಮವನ್ನು ಹೊಂದುವಿ ಅಥವಾ ಅನ್ಯಭಾಷೆ ಮಾತಾಡುವದರ ಮೂಲಕ ನೀನು ಪವಿತ್ರಾತ್ಮವನ್ನು ಹೊಂದುವಿ ಎಂದು ಹೇಳುವ ಯಾವ ವಚನವೂ ಅಲ್ಲಿಲ್ಲ. ಆದರೆ- ಅವರೆಲ್ಲರೂ ಪರಿಶುದ್ಧಾತ್ಮನಿಂದ ತುಂಬಿದ ಮೇಲೆ ಅವರು ಅನ್ಯಭಾಷೆಯಲ್ಲಿ ಮಾತಾಡಿದರು, ಎಂದು ಅದು ಖಂಡಿತವಾಗಿ ಹೇಳುತ್ತದೆ. ಮತ್ತು ಆ ಮೇಲೆ ಅವರು ಪ್ರವಾದನೆಮಾಡಿದರು ಎಂದು ಹೇಳುತ್ತದೆ.

ಈ ದಿನದಲ್ಲಿ ಅನೇಕರಲ್ಲಿ ಸಾಮಾನ್ಯವಾದ ಭಾವನೆ ಏನೆಂದರೆ, ಅನ್ಯಭಾಷೆ ಮಾತಾಡುವದರ ಮೂಲಕ ಪವಿತ್ರಾತ್ಮವು ದೊರೆಯುವದು ಎಂದು ಹಕ್ಕು ಸಾಧಿಸುವವರು, ಒಂದು ಯಾಥಾರ್ಥವಾದ ಆತ್ಮೀಯ ಭಾಷೆಯಲ್ಲಿ ಮಾತಾಡುತ್ತಾರೆ. ಆದರೆ ಇದು ಹಾಗಿರುವದಿಲ್ಲ. ಯಾಕಂದರೆ ಅನೇಕ ಜನರು ಒಂದು ಗೊತ್ತಿರುವ ಭಾಷೆಯಲ್ಲಿ ಮಾತಾಡುತ್ತಾರೆ. ಆದರೆ ಇದು ಒಂದು ತಪ್ಪಾದ ಆತ್ಮದ ಪ್ರಭಾವದಿಂದಾಗಿ ಇರುತ್ತದೆ. ಈಗ, ನಾವು ಒಂದು ಕೂಟದ ಮಧ್ಯದಲ್ಲಿದ್ದೇವೆ ಮತ್ತು ಜನರೆಲ್ಲರೂ ಅನ್ಯಭಾಷೆಯಲ್ಲಿ ಮಾತಾಡುತ್ತಿದ್ದಾರೆ ಎಂದು ಹೇಳೋಣ. ಯಾವ ಭಾಷೆಯು ಆತ್ಮನಿಂದಾಗಿದೆ ಮತ್ತು ಯಾವದು ಸೈತಾನನಿಂದಾಗಿದೆ ಎಂದು ನೀನು ಹೇಗೆ ತಿಳಿಯಬಹುದು? ನಾನು ಅನ್ಯಜನರ ಮಧ್ಯದಲ್ಲಿದ್ದೆನು, ಅಲ್ಲಿ ಅವರ ಮಂತ್ರವಾದಿಗಳು ಒಂದು ತಲೆ ಬುರುಡೆಯಲ್ಲಿ ರಕ್ತವನ್ನು ತೆಗೆದುಕೊಂಡು ಕುಡಿದರು. ಮತ್ತು ಅನ್ಯಭಾಷೆಯಲ್ಲಿ ಮಾತಾಡಿದರು, ಮತ್ತು ಅದರ ಅರ್ಥವನ್ನು ಹೇಳಿದರು. ಮತ್ತು ಪ್ರವಾದನೆ ಹೇಳಿದರು. ಅವರು ಅನ್ಯಭಾಷೆಯಲ್ಲಿ ಬರೆಯಲೂ ಶಕ್ತರು. ಈಗ ಅನ್ಯಭಾಷೆಯು ಪವಿತ್ರಾತ್ಮವನ್ನು ಹೊಂದಿದ್ದರ ಚಿಹ್ನೆಯಾಗಿದ್ದರೆ, ಹಾಗಾದರೆ ಪ್ರತಿಯೊಂದು ಅನ್ಯಭಾಷೆಯು ದೇವರದ್ದಾಗಿರಲೇ ಬೇಕು. ಆದರೆ ಅನ್ಯ ಭಾಷೆಯು ಚಿಹ್ನೆ ಎಂದು ಹೇಳುವ ಜನರು- ಅಲ್ಲಿ ಸುಳ್ಳಾದ ಮತ್ತು ಸತ್ಯವಾಗಿರುವ ಅನ್ಯಭಾಷೆಗಳಿವೆ, ಯಾಕಂದರೆ ದೇವರಿಗೆ ಸಂಬಂಧಪಟ್ಟದ್ದು ನಿಜವಾಗಿರುತ್ತದೆ, ಮತ್ತು ಸೈತಾನೊಂದಿಗೆ ಸುಳ್ಳಾದದ್ದು ಇರುತ್ತದೆ ಎಂದೂ ನಂಬುತ್ತಾರೆ. ಹಾಗಾಗಿ ನನ್ನ ಪ್ರಶ್ನೆ ಏನೆಂದರೆ- ಯಾವದು ಸತ್ಯವೆಂದು ಯಾರು ತಿಳಿದಿದ್ದಾರೆ? ಏನು ಹೇಳಲ್ಪಟ್ಟದೆ ಎಂದು ತಿಳಿಯಲು ಆ ಭಾಷೆಯು ಯಾರಿಗೆ ತಿಳಿದದೆ? ಯಾರಲ್ಲಿ ಅದನ್ನು ತಿಳಿಯಲು

ವಿವೇಚನಾಶಕ್ತಿಯ ವರವಿದೆ? ಈಗ ಈ ಪ್ರಶ್ನೆಗಳಿಗೆ ಉತ್ತರ ಸಿಕ್ಕಿದರೆ, ಆಗ ನಾವು ಏನಾದರೂ ಹೇಳಬಹುದು. ಆದರೆ ಅದುವರೆಗೆ ಆ ಅನ್ಯಭಾಷೆಗಳ ಮೂಲ ಸ್ಥಾನದ ವಿಷಯ ನಾವು ಆಶ್ಚರಿಪಡಬೇಕಾಗಿದೆ. ಅನ್ಯಭಾಷೆಯು ಚಿಹ್ನೆಯಾಗಿದೆ ಎಂದು ನೀನು ಒಪ್ಪುವದಾದರೆ ಮತ್ತು ಏನು ಹೇಳಲ್ಪಟ್ಟಿದೆ ಎಂದು ತಿಳಿಯದೆ ಇರುವದಾದರೆ, ಕೊನೆಗೆ ಎಲ್ಲಾ ಅನ್ಯಭಾಷೆಗಳು ದೇವರದ್ದೆಂದು ನೀನು ಒಪ್ಪಲೇ ಬೇಕಾಗುವ ಸ್ಥಿತಿಗೆ ಬರಬೇಕಾಗುತ್ತದೆ, ಎಂದು ನೀನು ಈಗಾಗಲೇ ನೋಡಬಹುದು. ಮತ್ತು ಕಡೆಗೆ, ಪಿಶಾಚನು ಅನ್ಯಭಾಷೆಯಲ್ಲಿ ಮಾತನಾಡಲಾರನು ಎಂಬದನ್ನು ನಾವು ನಂಬುವಂಥಹ ಸ್ಥಿತಿಗೆ ಅದು ನಮ್ಮನ್ನು ನಡಿಸುವದು. ಆದರೆ ಅದು ಹಾಗಿರುವದಿಲ್ಲ. ಇಲ್ಲ, ಒಂದು ನಿಮಿಷಕ್ಕಾದರೂ ಅದು ಹಾಗಿರುವದಿಲ್ಲ. ವಿದೇಶ ಕ್ಷೇತರಗಳಲ್ಲಿರುವ ಯಾವನೇ ನಿಜವಾದ ಮಿಷನರಿಯು ದುಷ್ಟಾತ್ಮಗಳು ಅನ್ಯಭಾಷೆಯಲ್ಲಿ ಮಾತಾಡುತ್ತವೆ ಎಂದು ಚೆನ್ನಾಗಿ ತಿಳಿದಿರುವನು. ಅದೇ ರೀತಿಯಾಗಿ ನಾನು ಸಹ ಇದನ್ನು ಅನುಭವದಿಂದ ತಿಳಿದಿರುತ್ತೇನೆ.

ಪೆಂಟಕೋಸ್ಟ್ ವೇದಾಂತ ಪಂಡಿತರು, ಜನರು ಪವಿತ್ರಾತ್ಮನ ಅಭಿಷೇಕ ಹೊಂದಿದಾಗ ಅನ್ಯಭಾಷೆಯಲ್ಲಿ ಮಾತಾಡುತ್ತಾರೆ ಎಂದು ಹೇಳಲು ಅಲ್ಲಿ (ಸತ್ಯವೇದದಲ್ಲಿ) ಯಾವ ವಚನವೂ ಇಲ್ಲ ಎಂದು ಒಪ್ಪುತ್ತಾರೆ. ಈ ತೀರ್ಮಾನವನ್ನು ಅವರು ಅಪೋಸ್ತಲರ ಕೃತ್ಯದ ಪುಸ್ತಕದ ಅನುಭವಗಳ ಮೂಲಕ ಮಾಡಿದ್ದಾರೆ. ಮತ್ತು ಇದರಲ್ಲಿ ಮೂರು ಸಾರಿ ಮಾತ್ರವೇ ಜನರು ಅನ್ಯ ಭಾಷೆಯಲ್ಲಿ ಮಾತಾಡಿದರು ಎಂದು ಅವರು ಒಪ್ಪುತ್ತಾರೆ. ಮತ್ತು ಯಾವ ವಚನದ ಆಧಾರವಿಲ್ಲದೆ, ಅಲ್ಲಿ ಎರಡು ವಿಧದ ಅನ್ಯಭಾಷೆಗಳಿವೆ ಎಂದು ಸಹ ಅವರು ಹೇಳುತ್ತಾರೆ. ಒಂದು ಅನ್ಯಭಾಷೆಯು ನೀನು ಪವಿತ್ರಾತ್ಮನನ್ನು ಹೊಂದಿದಾಗ ಮಾತಾಡುವ ಭಾಷೆಯಾಗಿದೆ, ಮತ್ತು ಅದು ಚಿಹ್ನೆಯಾಗಿರುತ್ತದೆ. ಮತ್ತು ಆಮೇಲೆ ನೀನು ನಂಬುವದಾದರೆ, ನೀನು ಅನ್ಯಭಾಷೆಯವರವನ್ನು ಹೊಂದಬಹುದು. ಆಗ ನೀನು ಆಗಾಗ್ಗೆ ಇದನ್ನು ಮಾತಾಡಬಹುದು. ಆದರೂ, ಒಂದು ಸಾರಿ ಪವಿತ್ರಾತ್ಮನನ್ನು ಹೊಂದಿದ ಚಿಹ್ನೆಯಾಗಿ ನೀನು ಅನ್ಯಭಾಷೆಯಲ್ಲಿ ಮಾತಾಡಿದ ನಂತರ, ನೀನು ಪುನಃ ಎಂದೂ ಮಾತಾಡದೇ ಇರಬಹುದು ಎಂದು ಅವರು ಹೇಳುತ್ತಾರೆ. ಇನ್ನೊಂದು ಸಾರೆ ಇದು ವಚನದಲ್ಲಿ ಎಲ್ಲಿ ಕಂಡುಬರುತ್ತದೆ ಎಂದು ತಿಳಿಯಲು ನಾವು ಆತುರವುಳ್ಳವರಾಗಿದ್ದೇವೆ. ಅದು ಅಲ್ಲಿ ಇಲ್ಲದಿದ್ದರೆ, ಆಗ

ದೇವರು ಅದನ್ನು ಹೇಳಲಿಲ್ಲ, ಮತ್ತು ಈ ರೀತಿ ವಚನಕ್ಕೆ ಹೆಚ್ಚು ಮಾತುಗಳನ್ನು ತಂದು ಹಾಕುವವನಿಗೆ ವಿಪತ್ತು ಬರಲಿ. ಆದರೆ ಅಲ್ಲಿ ವಚನದಲ್ಲಿ ಇದೇ ವಿಷಯದ ಬಗ್ಗೆ ಏನೋ ಹೇಳಲ್ಪಟ್ಟಿದೆ, ಅದನ್ನು ಅವರು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಾರೆ. ಒಂದನೇ ಕೊರಿಂಥ 13. ಅದು ಮನುಷ್ಯರ ಮತ್ತು ದೇವದೂತರ ಭಾಷೆಗಳ ವಿಷಯ ಹೇಳುತ್ತದೆ. ಇದು ತಿಳಿದಿರುವ ಮತ್ತು ತಿಳಿಯದಿರುವ ಭಾಷೆಗಳಾಗಿರುತ್ತವೆ. ತಿಳಿಯದಿರುವ ಮತ್ತು ದೇವದೂತರ ಭಾಷೆಗಳನ್ನಾಡಿಕೊಂಡು ಅವರು ಪವಿತ್ರಾತ್ಮವನ್ನು ಹೊಂದಲು ಸಾಧ್ಯವಿದೆ ಎಂದು ಆಧುನಿಕ ಪೆಂಟಕೋಸ್ಟರು ಹೇಳುತ್ತಾರೆ. ಅವರು ಕುದುರೆಯ ಮುಂದೆ ಗಾಡಿಯನ್ನಿಡುವವರಾಗಿದ್ದಾರೆ. ಯಾಕಂದರೆ ಅಪೊಸ್ತಲರ ಕೃತ್ಯ 2ನೇ ಸಂಧಿಯಲ್ಲಿ ಜನರು ಒಂದು ಸಂಪೂರ್ಣ ದೇಶಭಾಷೆಯಲ್ಲಿ ಮಾತಾಡಿದರು, ಮತ್ತು ಅದನ್ನು ಅವಿಶ್ವಾಸಿಗಳು ಕೂಡಾ ಕೇಳಿ ಅರ್ಥಮಾಡಿಕೊಂಡರು.

ಈಗ ದೇವರು ಮೌನವಾಗಿರುವಾಗ, ನಾವೂ ಮೌನವಾಗಿರುವದು ಉತ್ತಮವಾಗಿರುತ್ತದೆ. ಆದರೆ ಆತನು ಎಲ್ಲಿ ಮಾತಾಡಿದ್ದಾನೋ ಅಲ್ಲಿ ನಾವು ಸಹ ಮಾತಾಡುವದು ಉತ್ತಮ. ಮತ್ತು ಆತನು ಈಗಾಗಲೇ ಏನು ಹೇಳಿದ್ದಾನೋ ಅದನ್ನೇ ನಾವು ಹೇಳೋಣ. ಆತನು ಚಿಹ್ನೆಯು ಏನಾಗಿರುವದೆಂದು ಹೇಳಿದ್ದಾನೆ. ಅಥವಾ ಪವಿತ್ರಾತ್ಮನ ಅಭಿಷೇಕವನ್ನು ಹೊಂದಿಕೊಂಡ ಮೇಲೆ ಏನು ಸಂಭವಿಸುವದೆಂದರೆ ನಮ್ಮೊಳಗೆ ಆ ಸಹಾಯಕನು ಬಂದು ನಮ್ಮನ್ನು ಎಲ್ಲಾ ಸತ್ಯಕ್ಕೆ ನಡಿಸುವನು ಎಂದು ಹೇಳಿದ್ದಾನೆ. ಆದರೆ ಆ ಸಹಾಯಕನು(ಬೋಧಕನು) ಒಂದು ಆಂತರ್ಯದ ಬೋಧಕನಾಗಿದ್ದಾನೆ. ಹೊರಗಿನ ಬೋಧಕನಲ್ಲ. ಒಳಗಿನಲ್ಲಿ ಆ ಆತ್ಮನು ಇಲ್ಲದೇ ಇರುತ್ತಿದ್ದರೆ, ನೀನು ದಿನದ ಪ್ರತೀ ಕ್ಷಣದಲ್ಲಿ ಅದನ್ನು ಕೇಳಿದರೂ ನೀನು ಆ ಸತ್ಯವನ್ನು ಕೇಳಿ, ಅದನ್ನು ಪ್ರಕಟನೆಯ ಮೂಲಕ ಅಂಗೀಕರಿಸಲಾರಿ. ಪೌಲನ ದಿನಗಳಲ್ಲಿ ಒಳಗಿನಲ್ಲಿ ವಾಸಿಸುವ ಆತ್ಮನ ಚಿಹ್ನೆಯು ಅದುವೇ ಆಗಿತ್ತು. ದೇವರಾತ್ಮನಿಂದ ತುಂಬಿಸಲ್ಪಟ್ಟವರು ಆ ವಾಕ್ಯವನ್ನು ಕೇಳಿದರು. ಅದನ್ನು ಸ್ವೀಕರಿಸಿದರು ಮತ್ತು ಅದರಂತೆ ನಡೆದರು. ಆ ಆತ್ಮನಿಲ್ಲದವರು, ಕೇವಲ ಲೌಕೀಕ ಜನರಂತೆ ಅದನ್ನು ಕೇಳಿದರು, ಅದಕ್ಕೆ ಒಂದು ತಪ್ಪಾದ ಅರ್ಥವನ್ನು ಕೊಟ್ಟು, ಮತ್ತು ಪಾಪಕ್ಕೆ ಹೋದರು.

ಪ್ರತೀ ಯುಗದಲ್ಲಿ (ಮತ್ತು ನಿಜ ವಿಶ್ವಾಸಿಗೆ ಪ್ರತಿ ಯುಗವು ಪವಿತ್ರಾತ್ಮನ ಯುಗವಾಗಿರುತ್ತದೆ.)- ನಾನು ಹೇಳುವದೇನೆಂದರೆ ಪ್ರತಿಯುಗದಲ್ಲಿ ಆ ಚಿಹ್ನೆಯು

ಒಂದೇ ರೀತಿಯಾಗಿತ್ತು. ಪವಿತ್ರಾತ್ಮನನ್ನು, ಆ ಬೋಧಕನನ್ನು ಹೊಂದಿದ್ದವರು, ವಾಕ್ಯವನ್ನು ಕೇಳಿದರು. ಮತ್ತು ಅವರಲ್ಲಿದ್ದ ಆತ್ಮವು ಆ ವಾಕ್ಯವನ್ನು ತೆಗೆದುಕೊಂಡು ಮತ್ತು ಅದನ್ನು ಅವರಿಗೆ ಕಲಿಸಿತು. ಮತ್ತು ಅವರು ಆ ಸಂದೇಶಗಾರನನ್ನು ಮತ್ತು ಅವನ ಸಂದೇಶವನ್ನು ಕೇಳಿದ ಮತ್ತು ಅದನ್ನು ತೆಗೆದುಕೊಂಡ ಮತ್ತು ಅದರಂತೆ ನಡೆದ ಗುಂಪಿನವರಾಗಿದ್ದರು.

ಪಂಚಾಶತ್ತಮ ದಿನಕ್ಕೆ ಮತ್ತು ಕೊರ್ನೇಲ್ಯನ ಮನೆಯಲ್ಲಿ ಪವಿತ್ರಾತ್ಮವು ಬಿದ್ದಂಥಾ ದಿನಕ್ಕೆ ಹಿಂದೆ ಹೋಗಿ ಮತ್ತು ಅಲ್ಲಿ ಎರಡು ಸ್ಥಳಗಳಲ್ಲಿಯೂ ನಡೆದಂಥಾ ಒಂದೇ ರೀತಿಯ ಅನುಭವಗಳನ್ನು ಒಂದು ಪವಿತ್ರಾತ್ಮನಿಂದ ಅಭಿಷೇಕಿಸಲ್ಪಟ್ಟ ಗುರುತಾಗಿ ತೆಗೆದುಕೊಳ್ಳುವಂಥದ್ದು ಒಂದು ದೊಡ್ಡ ಶೋಧನೆಯೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಆ ಪ್ರತೀ ಸಂದರ್ಭ ದಲ್ಲಿಯೂ ಆ ಅನ್ಯಭಾಷೆಗಳನ್ನು ಕೇಳಿದವರು ಅದರ ಅರ್ಥವನ್ನು ತಿಳಿದುಕೊಂಡರು. ಆದರೆ ಆಧುನಿಕ ಪೆಂಟಕೋಸ್ಟ್ ಕೂಟಗಳ ಗಲಿಬಿಲಿಯ ಬಾಬೇಲಿನಿಂದ ಈ ಅನುಭವವು ಬಹಳಷ್ಟು ದೂರದ ಕೂಗಾಗಿದೆ. ಮತ್ತು ಅಂಥಹಾ ತರ್ಕವನ್ನು ಬಿಟ್ಟು ಬಿಡುವದಕ್ಕಾಗಿ ನಮ್ಮನ್ನು ಒತ್ತಾಯಿಸಲು ಇದು ನಮಗೆ ಸಾಕಾಗದಿದ್ದರೆ, ಎಂದೂ ಅನ್ಯ ಭಾಷೆಯನ್ನಾಡದ ಜನರ ಜೀವನದಲ್ಲಿ ಇನ್ನುಳಿದ ಜ್ಞಾನ ವಾಕ್ಯ, ಸತ್ಯಾಸತ್ಯಾತ್ಮಗಳನ್ನು ವಿವೇಚಿಸುವವರ, ವಿದ್ಯಾ ವಾಕ್ಯ, ನಂಬಿಕೆ, ನಾನಾರೋಗಗಳನ್ನು ವಾಸಿಮಾಡುವವರ, ಮಹತ್ತುಗಳನ್ನು ಮಾಡುವವರ ಇಂಥವುಗಳಾದ ಎಂಟು ವರಗಳ ಪ್ರದರ್ಶನವು ಇರುವದೆಂಬ ಸತ್ಯಾಂಶದಿಂದ ನಾವು ಎದುರಿಸಲ್ಪಟ್ಟರೆ ನಾವು ಏನು ಮಾಡುವೆವು? ಮತ್ತು ಇಲ್ಲಿ ಅನ್ಯಭಾಷೆಯು ಒಂಬತ್ತು ವರಗಳಲ್ಲಿ ಒಂದು ಚಿಕ್ಕದಾದ ವರವೆಂದು ಕಂಡು ಕೊಳ್ಳುವಂಥಹದು ಬಹಳ ಕುತೂಹಲದಾಯಕವಾದ ಸಂಗತಿಯಾಗಿದೆ; ಹಾಗಾದರೆ ನಾವು ಅನ್ಯಭಾಷೆಯಲ್ಲಿ ಮಾತಾಡದ, ಎಂದೂ ಮಾತಾಡದ ಜನರು ಅನ್ಯ ಭಾಷೆಯಲ್ಲಿ ಮಾತಾಡುವ ಜನರಿಗಿಂತ ಹೆಚ್ಚಿನದಾದ ವರಗಳನ್ನು ಉಪಯೋಗಿಸುವದನ್ನು ನೋಡುವಾಗ, ನಾವು ಅಂಥಹಾ ಸಿದ್ಧಾಂತವನ್ನು ಮೊದಲಿಗಿಂತ ಹೆಚ್ಚಾಗಿ, ಸಂಪೂರ್ಣವಾಗಿ ಬೆಲೆಯಿಲ್ಲದ್ದಾಗಿ ಮಾಡಬೇಕಾಗಿರುತ್ತದೆ.

ಹಾಗಾಗಿ ಸತ್ಯವೇದವು ಹೇಳದಿರುವಂಥದ್ದನ್ನು ನಾವು ಹೇಳಲ ಸಾಧ್ಯವೆಂದು ನಾವು ಈಗ ನೋಡುತ್ತೇವೆ. ವಾಕ್ಯವು ಪವಿತ್ರಾತ್ಮನ ಕಾರ್ಯ, ಮತ್ತು ಆ ಸ್ತುತ್ಯ ವ್ಯಕ್ತಿಯ ಪ್ರಕಟನೆಯು, ಪ್ರತೀ ಯುಗದ ನಿಜವಾದ ಬೀಜಕ್ಕೆ (ವಂಶ)

ಪ್ರತಿಯುಗದ ಸತ್ಯವನ್ನು ತರುವಂಥದ್ದೇ ಆಗಿದೆ ಎಂದು ನಮಗೆ ಬೋಧಿಸುತ್ತಿರುವಾಗ, ಆ ವ್ಯಕ್ತಿಯಲ್ಲಿ ಆ ಆತ್ಮವು ಬಂದು ವಾಸಿಸಲೇಬೇಕು, ಇಲ್ಲದಿದ್ದರೆ ಆ ಸಮಯಕ್ಕಾಗಿರುವ ಸತ್ಯವನ್ನು ಅವನು ಅಂಗೀಕರಿಸಲಾರನು ಎಂದು ನಾವು ತಿಳಿದುಕೊಳ್ಳುತ್ತೇವೆ. ಆಮೆನ್. ಇದು ನಿಷ್ಕೃಷ್ಟವಾಗಿ ಸತ್ಯವಾಗಿದೆ. ಮತ್ತು ಈ ಯುಗಗಳು ಏನನ್ನಾದರೂ ತರುವದಾದರೆ, ಅವು ಖಂಡಿತವಾಗಿ ಈ ಸತ್ಯವನ್ನು ಹೊಂದಿಕೊಂಡಿರುವವು ಮತ್ತು ಹೊರತರುವವು.

ಈಗ ಈ ವಿಷಯವನ್ನು ಬಿಡುವ ಮೊದಲು, ವಚನಕ್ಕನುಸಾರವಾದ, ಪವಿತ್ರಾತ್ಮನ ಅಭಿಷೇಕವು ಏನೆಂಬುದಾಗಿ ನಾನು ಬಹಳ ಸ್ಪಷ್ಟವಾಗಿ ತೋರಿಸಲು ಇಚ್ಛಿಸುತ್ತೇನೆ. ಅದು ನನ್ನ ಪ್ರಕಾರವಾಗಿ ಅಲ್ಲ. ಮತ್ತು ಅದು ನಿಮಗನುಸಾರವಾಗಿಯೂ ಅಲ್ಲ. ಅದು- ಯೆಹೋವನು ಇಂತೆನ್ನುತ್ತಾನೆ, ಎಂಬದಕ್ಕನುಸಾರವಾಗಿ ಇರಬೇಕು, ಇಲ್ಲದಿದ್ದರೆ ನಾವು ಸುಳ್ಳಾದ ರೀತಿಯಲ್ಲಿ ನಡೆಸಲ್ಪಡುತ್ತಿದ್ದೇವೆ. ಆಮೆನ್.

ಮೊತ್ತಮೊದಲಾಗಿ ನೀವು ಲಕ್ಷ್ಯಕ್ಕೆ ತರಬಹುದೇನೆಂದರೆ, ನಾನು ಒಂದು ಸುವಾರ್ತಾಕೂಟದಲ್ಲಿ ಬೋಧನೆಯನ್ನು ಕೊಟ್ಟನಂತರ ಅಥವಾ ಕಲಿಸಿದನಂತರ, ನನ್ನ ಕೂಟಗಳಲ್ಲಿ ನಾನು ಬಲೆಹಾಕಿ ಜನರಿಂದ ಪ್ರತಿಕ್ರಿಯೆಯನ್ನು ಆಹ್ವಾನಿಸುತ್ತೇನೆ. ನಾನು ಅವರಿಗೆ ಮುಂದೆ ಬಂದು ಪವಿತ್ರಾತ್ಮವನ್ನು ಹೊಂದಿಕೊಳ್ಳಲು ಹೇಳುತ್ತೇನೆ. ನನ್ನ ಪೆಂಟಕೋಸ್ಟ್ ಮಿತ್ರರು, ನಾನು ಇದನ್ನು ಹೇಳುವದನ್ನು ಕೇಳಿ, ಜನರು ಈಗಾಗಲೇ ಪುನರ್ಜನ್ಮವನ್ನು ಹೊಂದಿರುವದರಿಂದ, ನಾನು ಅವರನ್ನು ಮುಂದೆ ಬಂದು ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಪಡೆಯಲು ಆಹ್ವಾನಿಸುತ್ತಿದ್ದೇನೆ ಎಂದು ನಂಬುತ್ತಾರೆ. ಹೀಗಾಗಿ ನಾನು ಆತ್ಮನಿಂದ ತುಂಬಿಸಲ್ಪಟ್ಟವರನ್ನು, ನನ್ನ ಕರೆಯನ್ನು ಕೇಳಿ ಪವಿತ್ರಾತ್ಮನನ್ನು ಸ್ವೀಕರಿಸಲು ಮುಂದೆ ಬಂದವರನ್ನು ನೋಡಿಕೊಂಡು ಅವರನ್ನು ನಡಿಸಲು ಆಹ್ವಾನಿಸಿ ಕರೆದಾಗ, ಈ ಪ್ರಿಯ ಜನರು ಕೂಡಲೇ ಮುಂದೆ ಬಂದು, ಅವರೊಡನೆ ಯಾವ ರೀತಿಯಾಗಿ ವ್ಯವಹರಿಸುತ್ತಾರೆಂದರೆ- ಅವರು ಅವರನ್ನು, ದೇವರಿಗೆ ಎಡೆಗೊಡುವಂತೆ ಮಾಡಿ ಮತ್ತು ಅನ್ಯಭಾಷೆಯಲ್ಲಿ ಮಾತಾಡುವದಕ್ಕಾಗಿ ನಂಬುವಂತೆ ಹುರಿ ದುಂಬಿಸುತ್ತಾರೆ. ಇದು ಬಹಳವಾದ ಗಲಿಬಿಲಿಯನ್ನುಂಟು ಮಾಡಿದೆ ಮತ್ತು ನಾನು ನಿಜವಾಗಿ ಇದರಲ್ಲಿ ಏನನ್ನು ನಂಬುತ್ತೇನೆಂದು ನಿಮಗೆ ಹೇಳಲು ಇಚ್ಛಿಸುತ್ತೇನೆ. ಪಾಪಿಯು ಮುಂದೆ ಬಂದು ಪುನರ್ಜನ್ಮ ಹೊಂದಬೇಕಾಗುವದಕ್ಕಾಗಿ ನಾನು ಇದನ್ನು

ಹೇಳುತ್ತೇನೆ. ಆದೇನೆಂದರೆ ಪವಿತ್ರಾತ್ಮನಿಂದ ಕ್ರಿಸ್ತನ ದೇಹದೊಳಗೆ ದೀಕ್ಷಾಸ್ನಾನ ಹೊಂದುವದೇ. ಇದು ಸರಿಯಾಗಿ ಆದಿ ಸಭೆಯಲ್ಲಿ ಪಂಚಾಶತ್ತಮ ದಿನದಲ್ಲಿ ನಡೆದಂತಾದ್ದೇ ಆಗಿರುತ್ತದೆ. ಬೇರೆ ಮಾತಿನಲ್ಲಿ ಹೇಳುವದಾದರೆ, ಆತ್ಮನಿಂದ ಹುಟ್ಟುವದೆಂದರೆ ನಿಜವಾಗಿ ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೊಂದುವದು ಎಂದು ಅರ್ಥ. ಅವು ಎರಡೂ ಒಂದೇ ಆಗಿರುತ್ತದೆ.

ನಾನೊಬ್ಬ ಬಾಪ್ಟಿಸ್ಟ್ ಬೋಧಕನಾಗಿ ದೀಕ್ಷೆಮಾಡಲ್ಪಟ್ಟಿದ್ದೆನು ಎಂದು ಅನೇಕರು ತಿಳಿದಿದ್ದಾರೆ. ನೀನು ನಂಬಿದಾಗ ಪವಿತ್ರಾತ್ಮವನ್ನು ಹೊಂದಿದ್ದೀ ಎಂದು ಬಾಪ್ಟಿಸ್ಟರು ಹೇಳುವಂಥಾದ್ದು ತಪ್ಪಾಗಿದೆ, ಯಾಕಂದರೆ ಅದು ಆ ರೀತಿಯಲ್ಲ ಎಂದು ನಾನು ಖಡಾ ಖಂಡಿತವಾಗಿ ಹೇಳಿದ್ದೆನು ಮತ್ತು ಅದು ಸರಿಯಲ್ಲ ಎಂದು ನಾನು ನಿರಂತರ ಹೇಳುತ್ತಿದ್ದದ್ದು ಈಗ ಒಂದು ಕ್ಷಣಕ್ಕಾಗಿ ಗಲಿಬಿಲಿಯನ್ನುಂಟು ಮಾಡುತ್ತದೆ ಎಂದು ನಾನು ನಂಬುತ್ತೇನೆ. ನೀನು ನಂಬಿದಾಗ ಆತನನ್ನು ಸ್ವೀಕರಿಸುತ್ತೀ. ಅಪೋಸ್ತಲರ ಕೃತ್ಯ 19:2-6,- *ನೀವು ನಂಬಿದಾಗ ಪವಿತ್ರಾತ್ಮ ವರವನ್ನು ಹೊಂದಿದಿರೋ ಎಂದು ಅವರನ್ನು ಕೇಳಲು ಅವರು ಅವನಿಗೆ- ಇಲ್ಲ, ಪವಿತ್ರಾತ್ಮ ವರವು ಉಂಟೆಂಬದನ್ನೇ ನಾವು ಕೇಳಲಿಲ್ಲ ಅಂದರು. ಅವನು- ನೀವು ಯಾವದನ್ನು ನಂಬಿ ದೀಕ್ಷಾಸ್ನಾನಮಾಡಿಸಿಕೊಂಡಿರಿ ಎಂದು ಕೇಳಿದ್ದಕ್ಕೆ ಅವರು - ಯೋಹಾನನ ಬೋಧನೆಯನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡೆವು ಅಂದರು. ಅದಕ್ಕೆ ಪೌಲನು - ಯೋಹಾನನು ದೇವರ ಕಡೆಗೆ ತಿರಿಗಿಕೊಂಡವರಿಗೆ ದೀಕ್ಷಾಸ್ನಾನಮಾಡಿಸಿ ತನ್ನ ಹಿಂದೆ ಬರುವಾತನಲ್ಲಿ ಅಂದರೆ ಯೇಸುವಿನಲ್ಲಿ ನಂಬಿಕೆ ಇಡಬೇಕಾಗಿ ಜನರಿಗೆ ಹೇಳಿದನು ಎಂದು ಹೇಳಲು ಅವರು ಆ ಮಾತನ್ನು ಕೇಳಿ ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು. ಪೌಲನು ಅವರ ಮೇಲೆ ಕೈಗಳನ್ನಿಡಲು ಪವಿತ್ರಾತ್ಮ ವರವು ಅವರ ಮೇಲೆ ಬಂತು. ಅವರು ನಾನಾ ಭಾಷೆಗಳನ್ನಾಡಿದರು, ಪ್ರವಾದಿಸಿದರು. ಅವರು ಸುಮಾರು ಹನ್ನೆರಡು ಮಂದಿ ಗಂಡಸರು.* ಅದು ಹಾಗಿದೆ. ಪೌಲನು,- ನೀವು ನಂಬಿದ್ದರಿಂದ **(since)** (ನಂಬಿದ ಸಮಯದಿಂದ) ಹೊಂದಿದಿರೋ, ಎಂದು ಕೇಳಿದನು, ನೀವು ನಂಬಿದಾಗ **(after)** ಎಂದಲ್ಲ. ಇಲ್ಲಿ ಬಹಳ ವ್ಯತ್ಯಾಸವಿದೆ. ಯಾಕಂದರೆ ನಾವು ನಂಬಿದನಂತರ ನಾವು ಹೊಂದುತ್ತೇವೆ. ಎಫೆಸ 1:13, ಅಪೋಸ್ತಲರ ಕೃತ್ಯ 19ನೇ ಸಂಧಿಯ ಅನುಸಾರವಾಗಿ, ಎಫೆಸದಲ್ಲಿ ಸಂಭವಿಸಿದಂತಹ ಅದೇ ವಾಕ್ಯದ ಸರಿಯಾದ ಪುನರಾವರ್ತನೆಯಾಗಿದೆ. ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆ

ಎಂಬ ಸತ್ಯ ವಾಕ್ಯವನ್ನು ಕೇಳಿ ಕ್ರಿಸ್ತನಲ್ಲಿ ನಂಬಿಕೆ ಇಟ್ಟವರಾದ ನೀವು ಸಹ ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ. (ನಂಬಿದಾಗ ಅಲ್ಲ - ನಂಬಿದನಂತರ) ಈಗ ನನ್ನ ವಿಷಯವು ಇಲ್ಲಿಯೇ ಇದೆ. ನಮ್ಮ ಆಧುನಿಕ ಜನರಾದ ಅನೇಕರು ಮತ್ತು ನಮ್ಮ ಮೂಲವಾದಿಗಳು (Fundamentalists) ಸಹ (ಹಾಗೆಯೇ ಕರೆಯಲ್ಪಡುವವರು) ರಕ್ಷಣೆಗೋಸ್ಕರ, ಒಂದು ನಿಶ್ಚಿತ ಸಮಯದಲ್ಲಿ ನಂಬುತ್ತಾರೆ. ಅದು ಅನೇಕ ಪರಿಸ್ಥಿತಿಗಳಲ್ಲಿ - ನಿರ್ಧಾರಮಾಡುವದು, ಎಂದು ಕರೆಯಲ್ಪಡುತ್ತದೆ. ಮತ್ತು ಅದನ್ನು, ಕ್ರಿಸ್ತನನ್ನು ಅಂಗೀಕರಿಸುವದು ಅಥವಾ ಹೊಸದಾಗಿ ಹುಟ್ಟುವದು ಎಂದು ಕರೆಯುತ್ತಾರೆ. ಈಗ ಕ್ರಿಸ್ತನನ್ನು ಅಂಗೀಕರಿಸುವದೆಂದರೆ ಆತನ ಆತ್ಮವನ್ನು ಸ್ವೀಕರಿಸುವದಾಗಿದೆ. ಆತನ ಆತ್ಮವನ್ನು ಅಂಗೀಕರಿಸುವದೆಂದರೆ ಹೊಸದಾಗಿ ಹುಟ್ಟುವದಾಗಿದೆ. ಆತನ ಆತ್ಮವನ್ನು ಸ್ವೀಕರಿಸುವದೆಂದರೆ ಪವಿತ್ರಾತ್ಮನ ಅಭಿಷೇಕವನ್ನು ಹೊಂದುವದು. ಆಮೆನ್. ಈ ಜನರು ನಂಬುತ್ತಾರೆ. ಅದು ಅದ್ಭುತವಾಗಿದೆ. ಆದರೆ ಅವರು ಅಲ್ಲಿಯೇ ನಿಲ್ಲುತ್ತಾರೆ. ನೀನು ಪವಿತ್ರಾತ್ಮನನ್ನು, ನಂಬಿದನಂತರ, ಹೊಂದುತ್ತೀ. ಅದು ಯಾವಾಗಲೂ ಹಾಗೆಯೇ ಇತ್ತು, ಮತ್ತು ಎಂದೂ ಹಾಗೆಯೇ ಇರುವದು. ಜನರಿಗೋಸ್ಕರ ಮೊತ್ತಮೊದಲ ಬಾರಿ ವಾಕ್ಯದ ಆಜ್ಞೆಯನ್ನು ಕೊಟ್ಟವನು ಪೇತ್ರನು. ಮತ್ತು ಅದು ಪಂಚಾಶತ್ತಮ ದಿನದಲ್ಲಿ ಅವನು ಹೇಳಿದ್ದು, - ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮ ದಾನವನ್ನು ಹೊಂದುವಿರಿ. ಈ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರು ವವರೆಲ್ಲರಿಗೂ, ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ ಎಂದು ಹೇಳಿದನು.

ಈ ಆಜ್ಞೆಗಳು ಪೇತ್ರನಿಂದ ಒಂದು ನೇರವಾದ ಉತ್ತರದ ರೀತಿಯಲ್ಲಿ ಬಂದವು. ಇದು ಪಂಚಾಶತ್ತಮ ದಿನದಲ್ಲಿ ನಿಜವಾಗಿ ಏನು ಸಂಭವಿಸಿತ್ತೋ ಅದಕ್ಕೆ ಸಂಬಂಧಿಸಿತ್ತು. ಏನು ಸಂಭವಿಸಿತ್ತೆಂದರೆ ದೇವರು ಯೋವೇಲನ ಪ್ರವಾದನೆಗೆ ಅನುಸಾರವಾಗಿ, ವಾಗ್ದಾನಮಾಡಿದ ಪವಿತ್ರಾತ್ಮವನ್ನು ಎಲ್ಲಾ ಮನುಷ್ಯರ ಮೇಲೆ ಸುರಿಸುತ್ತಿದ್ದನು. ಆತ್ಮನು ಸಮಯಕ್ಕೆ ಮೊದಲಾಗಿಯೇ ಸುರಿಸಲ್ಪಡಲಿಲ್ಲ. ಅಥವಾ ಆ ಸಮಯಕ್ಕೆ ಮೊದಲೇ ಕೊಡಲ್ಪಡಲಿಲ್ಲ. ಆ ಸಮಯವು ಇದುವೇ ಆಗಿತ್ತು. ಆದರೆ ಅದು ಇಂದಿನಿಂದ ಮಾನಸಾಂತರ ಪಟ್ಟು ಕರ್ತನಾದ ಯೇಸು ಕ್ರಿಸ್ತನ

ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿಕೊಳ್ಳುವದರ ಮೂಲಕ ಬರಬೇಕಾಗಿತ್ತು. ಮತ್ತು ಆಗ ಯಾರಾರು ಬಂದರೋ ಅವರನ್ನು ಆತ್ಮದಿಂದ ತುಂಬಿಸಲು ದೇವರು ಕಾರ್ಯಬದ್ಧನಾಗಿದ್ದನು. ಪೇತ್ರನು ಅಥವಾ ಬೇರೆ ಯಾವ ಅಪೋಸ್ತಲನಾದರೂ ಎಂದೂ- ನೀನು ಮೊದಲು ಹೊಸದಾಗಿ ಹುಟ್ಟಬೇಕು, ಮತ್ತು ನಂತರ ಆತ್ಮ ದಿಂದ ತುಂಬುವಿ ಎಂದು ಹೇಳಲಿಲ್ಲ.

ಪವಿತ್ರಾತ್ಮನನ್ನು ಹೊಂದುವದಕ್ಕೆ ಸಂಬಂಧಪಟ್ಟ ಅನುಭವದ ಮಾದರಿಯು ಇದೇ ಆಗಿದೆ, ಇದರನಂತರವೇ ಒಂದು ಜನರ ಮಂದೆಯ ಮೇಲೆ ಪವಿತ್ರಾತ್ಮವು ಬಿದ್ದದ್ದನ್ನು ಬಹಳ ಜಾಗರೂಕತೆಯಿಂದ ಲಕ್ಷಿಸಿರಿ. ಅಪೋಸ್ತಲರ ಕೃತ್ಯ 8:5-17,- *ಫಿಲಿಪ್ಪನು ಸಮಾರ್ಯವೆಂಬ ಪಟ್ಟಣಕ್ಕೆ ಹೋಗಿ ಕ್ರಿಸ್ತನನ್ನು ಅಲ್ಲಿರುವವರಿಗೆ ಪ್ರಕಟಿಸಿದನು.ಗುಂಪಾಗಿ ಕೂಡಿದ ಜನಗಳು ಫಿಲಿಪ್ಪನ ಮಾತುಗಳನ್ನು ಕೇಳಿ ಅವನು ಮಾಡಿದ ಸೂಚಕ ಕಾರ್ಯಗಳನ್ನು ನೋಡಿ ಅವನು ಹೇಳಿದ ಸಂಗತಿಗಳಿಗೆ ಏಕ ಮನಸ್ಸಾಗಿ ಲಕ್ಷ್ಯಕೊಟ್ಟರು. ಯಾಕೆಂದರೆ ಅನೇಕರೊಳಗಿಂದ ದೆವ್ವಗಳು ಮಹಾಶಬ್ದದಿಂದ ಕೂಗಿ ಹೊರಗೆಬಂದವು; ಮತ್ತು ಅನೇಕ ಪಾರ್ಶ್ವವಾಯು ರೋಗಿಗಳೂ ಕುಂಟರೂ ಸ್ವಸ್ಥಮಾಡಲ್ಪಟ್ಟರು. ಆ ಪಟ್ಟಣದಲ್ಲಿ ಬಹು ಸಂತೋಷವಾಯಿತು. ಆದರೆ ಕೆಲವು ಕಾಲದಿಂದ ಆ ಪಟ್ಟಣದಲ್ಲಿದ್ದ ಸಿಮೋನನೆಂಬ ಒಬ್ಬ ಮನುಷ್ಯನು ತಾನು ಏನೋ ಒಬ್ಬ ಮಹಾತ್ಮನೆಂದು ಹೇಳಿಕೊಂಡು ಮಂತ್ರ, ತಂತ್ರಗಳನ್ನು ನಡಿಸಿ ಸಮಾರ್ಯದ ಜನರಲ್ಲಿ ಬೆರಗನ್ನು ಹುಟ್ಟಿಸುತ್ತಿದ್ದನು. ಚಿಕ್ಕವರು ಮೊದಲುಗೊಂಡು ದೊಡ್ಡವರ ಪರ್ಯಂತರ ಎಲ್ಲರೂ - ಇವನು ಮಹಾ ಶಕ್ತಿ ಎನಿಸಿಕೊಂಡಿರುವ ದೇವರ ಶಕ್ತಿಯೇ ಎಂದು ಹೇಳಿಕೊಳ್ಳುತ್ತಾ ಅವನಿಗೆ ಲಕ್ಷ್ಯಕೊಡುತ್ತಿದ್ದರು. ಬಹುಕಾಲದಿಂದಲೂ ಅವನು ಮಂತ್ರ, ತಂತ್ರಗಳನ್ನು ನಡಿಸಿ ಜನರಲ್ಲಿ ಬೆರಗನ್ನು ಹುಟ್ಟಿಸುತ್ತಿದ್ದ ಕಾರಣದಿಂದ ಅವರು ಅವನಿಗೆ ಲಕ್ಷ್ಯಕೊಡುತ್ತಿದ್ದರು. ಆದರೆ ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸು ಕ್ರಿಸ್ತನ ಹೆಸರಿನ ವಿಷಯದಲ್ಲಿಯೂ ಶುಭ ವರ್ತಮಾನವನ್ನು ಸಾರಲು ಗಂಡಸರೂ ಹೆಂಗಸರೂ ನಂಬಿ ದೀಕ್ಷಾಸ್ನನ ಮಾಡಿಸಿಕೊಂಡರು. ಆಗ ಸೀಮೋನನು ಕೂಡಾ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡು ಫಿಲಿಪ್ಪನ ಸಂಗಡ ಯಾವಾಗಲೂ ಇದ್ದು ಸೂಚಕ ಕಾರ್ಯಗಳೂ ಮಹತ್ಕಾರ್ಯಗಳೂ ಉಂಟಾಗುವದನ್ನು ನೋಡಿ ಬೆರಗಾದನು. ಸಮಾರ್ಯದವರು ದೇವರ ವಾಕ್ಯವನ್ನು ಸ್ವೀಕರಿಸಿದ ವರ್ತಮಾನವನ್ನು*

*ಯೆರೂಸಲೇಮಿನಲ್ಲಿದ್ದ ಅಪೊಸ್ತಲರು ಕೇಳಿ ಪೇತ್ರ, ಯೋಹಾನರನ್ನು ಅವರ ಬಳಿಗೆ ಕಳುಹಿಸಿದರು. ಇವರು ಅಲ್ಲಿಗೆ ಬಂದು ಆ ಜನರಿಗೆ ಪವಿತ್ರಾತ್ಮನು ದೊರೆಯಬೇಕೆಂದು ಅವರಿಗೋಸ್ಕರ ಪ್ರಾರ್ಥನೆಮಾಡಿದರು. ಯಾಕೆಂದರೆ ಆ ವರವು ಅವರಲ್ಲಿ ಒಬ್ಬನ ಮೇಲಾದರೂ ಇನ್ನೂ ಬಂದಿರಲಿಲ್ಲ. ಅವರು ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಮಾತ್ರ ಮಾಡಿಸಿಕೊಂಡಿದ್ದರು. ಅಪೊಸ್ತಲರು ಅವರ ಮೇಲೆ ಕೈಗಳನ್ನಿಡಲು ಅವರು ಪವಿತ್ರಾತ್ಮ ವರವನ್ನು ಹೊಂದಿದರು. ಹನ್ನೆರಡನೆಯ ವಚನಕ್ಕನು ಸಾರವಾಗಿ, ಅವರು ವಾಕ್ಯವನ್ನು ನಂಬಿದರು. ಆಮೇಲೆ ಅವರು ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಮಾಡಿಸಿಕೊಂಡರು.* ಆದರೆ ಹದಿನಾರನೇ ವಚನಕ್ಕನು ಸಾರವಾಗಿ, ಇದೆಲ್ಲದರನಂತರವೂ ಇನ್ನೂ ಅವರು ಪವಿತ್ರಾತ್ಮವನ್ನು ಹೊಂದಿರಲಿಲ್ಲ. ಅದು ಕೇವಲ ನಂಬಿ ಮತ್ತು ಸರಿಯಾದ ರೀತಿಯಲ್ಲಿ ದೀಕ್ಷಾಸ್ನಾನವನ್ನು ಹೊಂದಿದನಂತರವೇ ಅವರು ಪವಿತ್ರಾತ್ಮವನ್ನು ಹೊಂದಿದರು. ಇದು ಪೇತ್ರನು, ಅಪೊಸ್ತಲರ ಕೃತ್ಯ 2:38-39ರಲ್ಲಿ ಬುನಾದಿ ಹಾಕಿದ ಮಾದರಿಗೆ ಸರಿಯಾಗಿಯೇ ಇದೆ.

ಇದರ ಮೇಲೆ ಆಶ್ಚರ್ಯಕರವಾದ ಪ್ರಕಾಶವನ್ನು ಚೆಲ್ಲಲು ಇನ್ನೊಂದು ವಚನವು ಅದು ಗಲಾತ್ಯ 3:13-14ರಲ್ಲಿ ಕಂಡುಬರುತ್ತದೆ. *ಅಬ್ರಹಾಮನಿಗೆ ಉಂಟಾದ ಆಶೀರ್ವಾದವು ಕ್ರಿಸ್ತ ಯೇಸುವಿನಲ್ಲಿ ಅನ್ಯ ಜನರಿಗೆ ಉಂಟಾಗುವಂತೆಯೂ ದೇವರು ವಾಗ್ದಾನಮಾಡಿದ ಆತ್ಮನು ನಮಗೆ ನಂಬಿಕೆಯ ಮೂಲಕ ದೊರಕುವಂತೆಯೂ ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬನೂ ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ.* ಈಗ ಅಬ್ರಹಾಮನ ಆಶೀರ್ವಾದವು- ಹೊಸದಾಗಿ ಹುಟ್ಟುವದು, ಮತ್ತು ಆತ್ಮನ ವಾಗ್ದಾನವು- ಪವಿತ್ರಾತ್ಮನ ದೀಕ್ಷಾಸ್ನಾನವಾಗಿದೆ ಮತ್ತು ಇವೆರಡೂ ಬೇರೆ ಬೇರೆ ಘಟನೆಗಳು ಎಂದು ಯಾವರೀತಿಯಲ್ಲಾದರೂ ಹೇಳಲು ಸಾಧ್ಯವಿಲ್ಲ. ಯಾಕಂದರೆ ವಾಕ್ಯವು ಹೀಗೆ ಹೇಳುತ್ತದೆ- ಯೇಸುವು ಕ್ರೂಜೆಯಲ್ಲಿ ಸತ್ತನು. ಮತ್ತು ಆ ಮರಣದ ಮತ್ತು ಪುನರುತ್ಥಾನದ ಮೂಲಕ, ಅಬ್ರಹಾಮನಿಗುಂಟಾದ ಆಶೀರ್ವಾದವು ಯೆಹೂದ್ಯರನ್ನು ಬಿಟ್ಟು ಅನ್ಯಜನರ ಮೇಲೆ ಬಂತು. ಅನ್ಯ ಜನರಿಗೆ ಪವಿತ್ರಾತ್ಮವು ದೊರಕುವಂತೆ ಇದು ಪ್ರಕಟವಾಯಿತು.

ನಾನು ಈಗಾಗಲೇ ಹೇಳಿದ್ದನ್ನು ಗ್ರಹಿಸಿ ತಿಳಿದುಕೊಳ್ಳುವದಾದರೆ, ಸತ್ಯವೇದದ ವಿದ್ಯಾರ್ಥಿಗಳು, ಪೌಲನು ಎಂದೂ ಮೊದಲು ಹೊಸದಾಗಿ ಹುಟ್ಟಿರಿ, ಆಮೇಲೆ ನೀವು ಪವಿತ್ರಾತ್ಮನಿಂದ ತುಂಬುವಿರಿ ಎಂಬದಾಗಿ ಹೇಳುವದನ್ನು ಯಾಕೆ ವಚನದಲ್ಲಿ ಕಂಡುಕೊಳ್ಳಲಿಲ್ಲ ಎಂಬದು ನಿಮಗೆ ಸ್ಪಷ್ಟವಾಗುವದು. ಅದು ಅಲ್ಲಿದೆ ಎಂದು ಅವರು ಊಹಿಸಿಕೊಂಡಿದ್ದಾರೆ. ಮತ್ತು ಅವರು ಅದು ಹಾಗೆ ಹೇಳುತ್ತದೆಂದು ಮಾಡಲು ತಮ್ಮದೇ ಆದ ಅರ್ಥವನ್ನು ಅದಕ್ಕೆ ಅವರು ಕೊಟ್ಟಿದ್ದಾರೆ. ಆದರೆ ವಾಕ್ಯವು ಹಾಗೆ ಹೇಳುವದಿಲ್ಲ. ಯೇಸುವು ಕೂಡಾ ಎಂದೂ ಹಾಗೆ ಹೇಳಲಿಲ್ಲ. ಯೋಹಾನ 7:37-39ರಲ್ಲಿ ನೋಡಿರಿ, ಮತ್ತು ಈಗ ಅದನ್ನು ಅರ್ಥಮಾಡಿಕೊಂಡು ಓದಿರಿ. *ಆ ಜಾತ್ರೆಯ ಮಹಾದಿವಸದ ಕಡೇ ದಿನದಲ್ಲಿ ಯೇಸು ನಿಂತುಕೊಂಡು-ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ. ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು ಎಂದು ಕೂಗಿ ಹೇಳಿದನು. ಇದನ್ನು ಯೇಸು ತನ್ನನ್ನು ನಂಬಿದವರು ಹೊಂದಲಿರುವ ಪವಿತ್ರಾತ್ಮ ವರವನ್ನು ಕುರಿತು ಹೇಳಿದನು. ಆತನು ಇನ್ನೂ ತನ್ನ ಮಹಿಮೆಯ ಪದವಿಯನ್ನು ಹೊಂದದೆ ಇದ್ದ ಕಾರಣ ಪವಿತ್ರಾತ್ಮವು ಇನ್ನೂ ಬಂದಿದ್ದಿಲ್ಲ.* ಈಗ ಅದು ಇಲ್ಲಿ ವಿಶ್ವಾಸಿಯು ನಂಬಿಕೆಯ ಮೂಲಕ ಕ್ರಿಸ್ತನ ಬಳಿಗೆ ಬಂದು ಕುಡಿಯುವದರ ಮೂಲಕ ಅವನೊಳಗಿಂದ ಜೀವಜಲದ ಒರತೆಗಳು ಹರಿಯುವವು ಎಂದು ಸ್ಪಷ್ಟವಾಗಿ ಮತ್ತು ನಿಶ್ಚಯಪೂರ್ವಕವಾಗಿ ಹೇಳುತ್ತದೆ. ಮತ್ತು ಅದು ಈ ಅನುಭವವನ್ನು ಪಂಚಾಶತ್ತಮ ದಿನದಲ್ಲಿ ಇಡುತ್ತದೆ. ಈಗ ಈ ವಿಷಯವನ್ನು ನಮ್ಮ ಮನಸ್ಸಿನಲ್ಲಿ ಇಟ್ಟುಕೊಂಡು ನಾವು ಯೋಹಾನ 4:10 ಮತ್ತು 14ನೇ ವಚನವನ್ನು ಓದೋಣ. (ದೇವರು ಕೊಡುವ ವರವೇನೆಂದೂ ಕುಡಿಯುವದಕ್ಕೆ ನೀರು ಕೊಡು ಎಂದು ನಿನಗೆ ಹೇಳಿದವನು ಯಾರೆಂಬದೂ ನಿನಗೆ ತಿಳಿದಿದ್ದರೆ ನೀನು ಅವನನ್ನು ಬೇಡಿ ಕೊಳ್ಳುತ್ತಿದ್ದಿ, ಅವನು ನಿನಗೆ ಜೀವಕರವಾದ ನೀರನ್ನು ಕೊಡುತ್ತಿದ್ದನು ಅಂದನು. ನಾನು ಕೊಡುವ ನೀರನ್ನು ಕುಡಿದವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ; ನಾನು ಅವನಿಗೆ ಕೊಡುವ ನೀರು ಅವನಲ್ಲಿ ಉಕ್ಕುವ ಒರತೆಯಾಗಿದ್ದು ನಿತ್ಯಜೀವವನ್ನು ಉಂಟುಮಾಡುವದು) ಎಂದು ಹೇಳಿದನು. ಅದೇ ಜೀವಕರವಾದ ನೀರು ಇಲ್ಲಿ ಹೇಳಲ್ಪಟ್ಟಿದೆ. ಆದರೆ ಈ ಸಾರಿ ಅದು ಹೊಳೆಯೆಂದು ಕರೆಯಲ್ಪಡಲಿಲ್ಲ, ಅದು ಒಂದು ಆರ್ಟೀಸಿಯನ್ ಬಾವಿಯೆಂದು ಕರೆಯಲ್ಪಟ್ಟಿದೆ. ಇಲ್ಲಿಯೇ ಜನರು ಅವರ ತಪ್ಪನ್ನು ಮಾಡುತ್ತಾರೆ.

ಅದು ಒಂದು ಬಾವಿ ಮತ್ತು ನದಿಯೆಂದು ಕರೆಯಲ್ಪಟ್ಟದ್ದರಿಂದ ಅದು ಒಂದು ಸ್ಥಳದಲ್ಲಿ ಆತ್ಮನಿಂದ ಕೊಡಲ್ಪಟ್ಟ ನಿತ್ಯಜೀವವಾಗಿದೆ ಮತ್ತು ಇನ್ನೊಂದು ಸ್ಥಳದಲ್ಲಿ ಅಂದರೆ ನದಿಯೆಂದು ಕರೆಯಲ್ಪಟ್ಟಲ್ಲಿ (ಒಂದು ದೊಡ್ಡ ಚಲನೆಯನ್ನು ಸೂಚಿಸುವಂಥಾದ್ದು) ಅದು ಈಗ ಆತ್ಮವಾಗಿರಬೇಕು. ಮತ್ತು ಇದು ಒಂದು ಶಕ್ತಿಯು ಧಾರಣೆಯಾಗಿ ಕೊಡಲ್ಪಟ್ಟದ್ದು ಎಂದು ಅವರು ಎಣಿಸುತ್ತಾರೆ. ಹಾಗಲ್ಲ. ಅವೆರಡೂ ಒಂದೇ ಆಗಿವೆ. ಆತ್ಮವೇ ಜೀವವನ್ನೂ ಶಕ್ತಿಯನ್ನೂ ಕೊಡುತ್ತದೆ. ಮತ್ತು ಅದು ಪಂಚಾಶತ್ತಮ ದಿನದಲ್ಲಿ ಬಂತು.

ಈ ತಪ್ಪು ತಿಳುವಳಿಕೆಗೆ ಯಾವದು ಕಾರಣವಾಗಿದೆ? ಉತ್ತರ,- ಅನುಭವ. ನಾವು ಅನುಭವದಿಂದ ಮುಂದೆ ಹೋಗಿದ್ದೇವೆ, ಆದರೆ ವಚನದಿಂದಲ್ಲ. ಅನುಭವವನ್ನು ಒಂದು ಅಳತೆಗೋಲಾಗಿ ಉಪಯೋಗಿಸುವಂಥದು ನಮ್ಮಿಂದ ದೂರವಿರಲಿ. ಅಲ್ಲಿ ಒಂದೇ ಒಂದು ಲಂಬಕ ಸೂತ್ರವಿದೆ. ಒಂದು ಅಳತೆಗೋಲು ಮತ್ತು ಅದು ವಾಕ್ಯವಾಗಿದೆ. ಈಗ ಜಾಗರೂಕರಾಗಿ ಲಕ್ಷಿಸಿರಿ. ಮತ್ತು ಇದನ್ನು ತಿಳಿದುಕೊಳ್ಳಿರಿ. ಪೇತ್ರನು ಹೇಳಿದ್ದು, - ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನಮಾಡಿಸಿಕೊಳ್ಳಿರಿ. ಆಗ ನೀವು ಪವಿತ್ರಾತ್ಮ ದಾನವನ್ನು ಹೊಂದುವಿರಿ. ಪೌಲನು-ನೀವು ನಂಬಿದ್ದಾಗ ಪವಿತ್ರಾತ್ಮವನ್ನು ಹೊಂದಿದ್ದೀರೋ? ಎಂದು ಕೇಳಿದನು. ಇಲ್ಲಿಯೇ ನಮ್ಮ ಎಲ್ಲಾ ಸಮಸ್ಯೆ ಇದೆ. ಜನರು ತಮ್ಮ ಪಾಪಗಳಿಗೋಸ್ಕರ ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಳ್ಳುತ್ತಾರೆ. ಅವರು ನೀರಿನಲ್ಲಿ ದೀಕ್ಷಾಸ್ನಾನವನ್ನು ಹೊಂದುತ್ತಾರೆ. ಆದರೆ ಅವರು ಮುಂದೆ ಹೋಗಿ ಪವಿತ್ರಾತ್ಮವನ್ನು ಹೊಂದುವದಿಲ್ಲ. ನೀವು ಆತ್ಮನನ್ನು ಹೊಂದುವದಕ್ಕಾಗಿ ವಿಶ್ವಾಸವಿಡುತ್ತೀರಿ. ಯೇಸುವಿನಲ್ಲಿ ವಿಶ್ವಾಸವಿಡುವದು ಒಂದು ಸರಿಯಾದ ಮಾರ್ಗದ ಕಡೆಗೆ ಇಡುವ ಹೆಜ್ಜೆಯಾಗಿದೆ. ಅದು ಪವಿತ್ರಾತ್ಮನ ಕಡೆಗೆಯೇ ಆಗಿದೆ. ಆದರೆ ಜನರು ಅಲ್ಲಿ ನಿಂತು ಬಿಡುತ್ತಾರೆ. ಅವರು ನೀರಿನವರೆಗೆ ಹೋಗಿ ಅಲ್ಲಿ ನಿಲ್ಲುತ್ತಾರೆ. ಅವರು ನಂಬುತ್ತಾರೆ ಆಮೇಲೆ ನಿಂತು ಬಿಡುತ್ತಾರೆ. ಸತ್ಯವೇದವು- ನೀವು ನಂಬಿದಾಗ ಅದನ್ನು ಹೊಂದುವಿರಿ ಎಂದು ಹೇಳುವದಿಲ್ಲ, ಅದು, ನೀವು ನಂಬಿದಾಗ ಪವಿತ್ರಾತ್ಮವನ್ನು ಹೊಂದಿದಿರೋ? ಎಂದು ಕೇಳುತ್ತದೆ. ನಿಜವಾದ ಮತ್ತು ಅಕ್ಷರಶಃ ತರ್ಜುಮೆ ಏನೆಂದರೆ- ನೀವು ಮೊದಲು ನಂಬಿದಂದಿನಿಂದ, ಪವಿತ್ರಾತ್ಮವನ್ನು ಹೊಂದಿದಿರೋ? ಜನರು ನಂಬುತ್ತಾರೆ ಮತ್ತು ಅಲ್ಲಿ ನಿಲ್ಲುತ್ತಾರೆ.

ನೀನು ಪಶ್ಚಾತ್ತಾಪಪಟ್ಟು ಆತನ ಕಡೆಗೆ ತಿರುಗಿ, ಆತನಲ್ಲಿ ನಂಬಿಕೆ ಇಟ್ಟಾಗ, ನೀನು ಪವಿತ್ರಾತ್ಮವನ್ನು ಹೊಂದುವದಿಲ್ಲ. ನೀನು ಹಾಗೆಯೇ ಮುಂದುವರಿಯುವಿ ಮತ್ತು ಪವಿತ್ರಾತ್ಮವನ್ನು ಹೊಂದುವಿ. ಇದನ್ನು ತಿಳಿದುಕೊಂಡಿರೋ? ನಮ್ಮ ಮೂಲಭೂತವಾದಿಗಳಲ್ಲಿರುವ ತಪ್ಪು ಇದೇ ಆಗಿದೆ. ಅವರಲ್ಲಿ ಶಕ್ತಿ ಇಲ್ಲ. ಯಾಕಂದರೆ ಅವರು ಪಂಚಾಶತ್ತಮದ ಮೊದಲೇ ನಿಂತುಬಿಡುತ್ತಾರೆ.

ಅವರು ಐಗುಪ್ತ ದೇಶದಿಂದ ಹೊರಬಂದು ವಾಗ್ದಾನಮಾಡಿದ ದೇಶಕ್ಕೆ ಹೋಗುವ ಮೊದಲು ನಿಂತುಬಿಟ್ಟಂತೆ (ವಾಗ್ದಾನಮಾಡಿದ ದೇಶಕ್ಕೆ ಹೋಗದೆ ಇದ್ದ) ಇಸ್ರಾಯೇಲ್ಯರಂತೆ ಇದ್ದಾರೆ. ಈಗ ಐಗುಪ್ತ ದೇಶವನ್ನು ಬಿಟ್ಟು ಹೊರಬಂದ ಆ ಇಸ್ರಾಯೇಲ್ಯರು ಸುಮಾರು 2 ಮಿಲಿಯ ಜನರು ಇದ್ದರು. ಅವರೆಲ್ಲರೂ ಒಟ್ಟಾಗಿ ಪ್ರಯಾಣಮಾಡಿದರು. ಎಲ್ಲರೂ ದೇವರ ಅದೇ ಅದ್ಭುತ ಕಾರ್ಯಗಳನ್ನು ನೋಡಿದರು. ಎಲ್ಲರೂ ಅದೇ ಮನ್ನವನ್ನು ತಿಂದರು ಮತ್ತು ಆ ಸೀಳಲ್ಪಟ್ಟ ಬಂಡೆಯಿಂದ ನೀರನ್ನು ಕುಡಿದರು. ಹಗಲಿನಲ್ಲಿ ಅವರೆಲ್ಲರೂ ಅದೇ ಮೇಘಸ್ತಂಭವನ್ನು ಹಿಂಬಾಲಿಸಿದರು ಮತ್ತು ರಾತ್ರಿಯಲ್ಲಿ ಅವರೆಲ್ಲರೂ ಅದೇ ಅಗ್ನಿಸ್ತಂಭವನ್ನು ಹಿಂಬಾಲಿಸಿದರು. ಆದರೆ ಕೇವಲ ಇಬ್ಬರೇ ಆ ವಾಗ್ದಾನದ ದೇಶವನ್ನು ಮುಟ್ಟಿದರು. ಕೇವಲ ಇಬ್ಬರು ಮಾತ್ರ ನಿಜವಾದ ಅಥವಾ ಸತ್ಯವಾದ ವಿಶ್ವಾಸಿಗಳಾಗಿದ್ದರು. ಇದು ಸತ್ಯವಾಗಿದೆ ಯಾಕಂದರೆ, ಉಳಿದವರು ಅಪನಂಬಿಕೆಯ ಕಾರಣದಿಂದ ಸತ್ತುಹೋದರು ಎಂದು ವಚನವು ನಮಗೆ ಹೇಳುತ್ತದೆ; ಮತ್ತು ಅಪನಂಬಿಕೆಯ ಕಾರಣದಿಂದ ಅವರು ಒಳಗೆ ಪ್ರವೇಶಮಾಡಲಾರದವರಾದರು. (ಇಬ್ರಿಯ 3:19) ಹಾಗಾಗಿ ಅದು ಹೀಗೆ ಇರುವದರಿಂದ, ಮತ್ತು ಕೇವಲ ಇಬ್ಬರೇ ಪ್ರವೇಶಮಾಡಿದ್ದರಿಂದ, ಉಳಿದವರು ನಿಜವಾದ ವಿಶ್ವಾಸಿಗಳಾಗಿರಲಿಲ್ಲ. ಇಲ್ಲಿರುವ ವ್ಯತ್ಯಾಸವೇನು? ಆ ಇಬ್ಬರು ವಾಕ್ಯದ ಆಧಾರದ ಮೇಲೆಯೇ ನಿಂತರು. ಕಾದೇಶ್ ಬಾರ್ನಿಯಾದಲ್ಲಿ ಆ ಹತ್ತು ಮಂದಿ ಗೂಢಾಚಾರರ ಹೃದಯಗಳು ವಿಫಲವಾದಾಗ ಯೆಹೋಶುವ ಮತ್ತು ಕಾಲೇಬರು ಧೈರ್ಯಗೆಡಲಿಲ್ಲ ಯಾಕಂದರೆ ಅವರು ದೇವರ ವಾಕ್ಯವನ್ನು ನಂಬಿದರು, ಮತ್ತು ನಾವು ಆ ದೇಶವನ್ನು ಖಂಡಿತವಾಗಿ ವಶಮಾಡಿಕೊಳ್ಳುವೆವು ಎಂದು ಹೇಳಿದರು. ಅವರಿಗೆ ತಾವು ಹಾಗೆ ಮಾಡಲು ಶಕ್ತರೆಂದು ತಿಳಿದಿತ್ತು. ಯಾಕಂದರೆ ದೇವರು- ನಾನು ಈ ದೇಶವನ್ನು ನಿಮಗೆ ಕೊಟ್ಟಿದ್ದೇನೆ, ಎಂದು ಹೇಳಿದ್ದಾನೆ. ಆ ಎಲ್ಲಾ ಇಸ್ರಾಯೇಲ್ಯರೂ, ದೇವರ ಶಕ್ತಿ ಮತ್ತು ಆತನ ಕೃಪೆ ಮತ್ತು

ಆತನ ಬಿಡುಗಡೆಯನ್ನು ನೋಡಿದನಂತರವೂ ಅವರು ಆ ವಿಶ್ರಾಂತಿಯಲ್ಲಿ ಸೇರಲಿಲ್ಲ. ಇದು ಒಂದು ಪವಿತ್ರಾತ್ಮನ ದರ್ಶಕವಾಗಿದೆ. ಹಾಗಾಗಿ ಸ್ವಲ್ಪವೇ ಜನರು, ದೇವರಾತ್ಮವನ್ನು ಹೊಂದುವವರೆಗೆ ವಿಶ್ವಾಸವಿಡುವರು ಎಂದು ನೀನು ಈಗಾಗಲೇ ನೋಡಬಹುದು.

ಸರಿ, ನಾವು ಇಷ್ಟರವರೆಗೆ ನೋಡಿದೆವು. ಈಗ ನಾನು ಮುಂದೆ ಹೋಗಲು ಆಶಿಸುವೆನು. ಮತ್ತು ನಾನು ಹಾಗೆ ಮಾಡುವಾಗ ಕೆಲವರು ಭಾವೋದ್ರೇಕ ಗೊಳ್ಳುವರು ಎಂದು ನನಗೆ ತಿಳಿದದೆ. ಆದರೆ ಆ ವಿಷಯಕ್ಕೆ ನಾನು ಜವಾಬ್ದಾರನಲ್ಲ. ದೇವರು ಯಾರಬಳಿಗೆ ನನ್ನನ್ನು ಕಳುಹಿಸಿದ್ದಾನೋ ಆ ಜನರಿಗೆ, ದೇವರಿಗೆ ಮತ್ತು ಆತನ ವಾಕ್ಯಕ್ಕೆ ನಾನು ಜವಾಬ್ದಾರನಾಗಿದ್ದೇನೆ ಅಷ್ಟೇ. ಆತನು ನನಗೆ ಏನೇನನ್ನು ಕೊಡುತ್ತಾನೋ ಆ ಎಲ್ಲಾದರಲ್ಲಿ ನಾನು ನಂಬಿಗಸ್ತ ನಾಗಿರಬೇಕು.

ಯೋಹಾನ 6:37ಮತ್ತು 44ರಲ್ಲಿ ಅದು ಹೀಗೆ ಹೇಳುತ್ತದೆ,- *ತಂದೆಯು ನನಗೆ ಕೊಡುವಂಥವರೆಲ್ಲರು ನನ್ನ ಬಳಿಗೆ ಬರುವರು; ಮತ್ತು ನನ್ನ ಬಳಿಗೆ ಬರುವವನನ್ನು ನಾನು ತಳ್ಳಿ ಬಿಡುವದೇ ಇಲ್ಲ. ನನ್ನನ್ನು ಕಳುಹಿಸಿಕೊಟ್ಟಂಥ ತಂದೆಯು ಎಳೆಯದ ಹೊರತು ಯಾವನೂ ನನ್ನ ಬಳಿಗೆ ಬರಲಾರನು; ಮತ್ತು ನಾನು ಅವನನ್ನು ಕಡೇ ದಿನದಲ್ಲಿ ಎಬ್ಬಿಸುವೆನು.* ಯೋಹಾನ 1:12- 13,- *ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆ ಇಟ್ಟರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು. ಇವರು ರಕ್ತ ಸಂಬಂಧದಿಂದಾಗಲಿ ಕಾಮದಿಂದಾಗಲಿ ಪುರುಷ ಸಂಕಲ್ಪದಿಂದಾಗಲಿ ಹುಟ್ಟಿದವರಲ್ಲ, ದೇವರಿಂದಲೇ ಹುಟ್ಟಿದವರು.* ಎಫೆಸದವರಿಗೆ 1:4-5,- *ಹೇಗೆಂದರೆ ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು. ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನ್ನು ಯೇಸು ಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಕ್ಕನುಸಾರವಾಗಿ ಮೊದಲೇ ಸಂಕಲ್ಪಮಾಡಿದನು.* ಈಗ ದೇವರ ಸಾರ್ವಭೌಮತ್ವದ ವಿಷಯದ ಕಡೆಗೆ ಆಳವಾಗಿ ಹೋಗದಿದ್ದು (ಯಾಕಂದರೆ ಈ ವಿಷಯವು ಒಂದು ದೊಡ್ಡ ಪುಸ್ತಕವೇ ಆದೀತು) ಈಗ ಈ ವಾಕ್ಯಗಳ ಅನುಸಾರವಾಗಿ, ಈ ದಿನದಲ್ಲಿ ಪುರುಷರು ತಮ್ಮ ವಧುವನ್ನು ಯಾವ

ರೀತಿ ಆರಿಸಿಕೊಳ್ಳುತ್ತಾರೋ ಅದೇ ರೀತಿಯಾಗಿ ಯೇಸು ಕ್ರಿಸ್ತನು ತನ್ನ ಸ್ವಂತ ವಧುವನ್ನು ಆರಿಸಿಕೊಳ್ಳುತ್ತಾನೆ ಎಂದು ನಾನು ಹೇಳುವೆನು. ಈ ದಿನದ ವಧುವು ಕೇವಲ ತಾನೊಂದು ನಿಶ್ಚಿತವಾದ ಪುರುಷನನ್ನು ತನ್ನ ಪತಿಯನ್ನಾಗಿ ತೆಗೆದುಕೊಳ್ಳುವೆನು ಎಂದು ನಿರ್ಧಾರ ಮಾಡುವದಿಲ್ಲ. ಇಲ್ಲಯ್ಯಾ. ವರನೇ ಒಂದು ನಿಶ್ಚಿತವಾದ ಸ್ತ್ರೀಯನ್ನು ತನ್ನ ವಧುವಾಗಿ ನಿರ್ಧರಿಸುತ್ತಾನೆ, ಮತ್ತು ಆರಿಸುತ್ತಾನೆ. (ಯೋಹಾನ 5:16,- ನೀವು ನನ್ನನ್ನು ಆರಿಸಿಕೊಂಡಿಲ್ಲ; ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡೆನು.) ಈಗ ದೇವರ ವಾಕ್ಯಕ್ಕನುಸಾರವಾಗಿ, ವಧುವು ಜಗದುತ್ಪತ್ತಿಗೆ ಮೊದಲೇ ಆರಿಸಲ್ಪಟ್ಟಿದ್ದಾಳೆ. ಈ ವಧುವಿನ ಆರಿಸುವಿಕೆ ಆತನ ಸ್ವಂತ ಉದ್ದೇಶವಾಗಿತ್ತು. ಎಫೆಸ 1:9. ಮತ್ತು ರೋಮಾಪುರದವರಿಗೆ 9:11ರಲ್ಲಿ ಅದು ಹೀಗೆ ಹೇಳುತ್ತದೆ - ಇದರಿಂದ ದೇವರು ತನಗೆ ಮನಸ್ಸಿದ್ದವರನ್ನು ಆರಿಸಿಕೊಳ್ಳುತ್ತಾನೆಂಬ ಸಂಕಲ್ಪವು ಸ್ಥಿರವಾಗಿರಬೇಕೆಂದು ತೋರಿಸಿದನು. ಅದನ್ನು ನೀವು ಬೇರೆ ಯಾವ ಇತರ ರೀತಿಯಲ್ಲಾದರೂ ಓದಲಾರಿರಿ. ದೇವರ ಹೃದಯದ ಉದ್ದೇಶ, ದೇವರ ನಿತ್ಯಕಾಲದ ಉದ್ದೇಶವೇನೆಂದರೆ ತನ್ನದೇ ಆದ ಆರಿಸುವಿಕೆಯ ಒಂದು ವಧುವನ್ನು ಆತನು ತೆಗೆದುಕೊಳ್ಳುವನು ಎಂಬದಾಗಿದೆ. ಮತ್ತು ಆ ಉದ್ದೇಶವು ಆತನಲ್ಲಿಯೇ ಇತ್ತು. ಮತ್ತು ಆತನು ನಿತ್ಯಕಾಲನಾಗಿದ್ದುದರಿಂದ, ಅದು ಜಗದುತ್ಪತ್ತಿಗೆ ಮೊದಲೇ ನಿರ್ಧಾರಮಾಡಲ್ಪಟ್ಟಿತ್ತು.

ಈಗ ಜಾಗರೂಕತೆಯಿಂದ ಲಕ್ಷಿಸಿರಿ ಮತ್ತು ಇದನ್ನು ನೋಡಿರಿ. ಅಲ್ಲಿ ಒಂದು ನಕ್ಷತ್ರದ ಧೂಳಿನ ಒಂದು ಕಣವಾದರೂ ಇರುವ ಮೊದಲು ದೇವರು ದೇವರಾಗಿದ್ದದಕ್ಕಿಂತಲೂ ಮೊದಲು (ದೇವರು ಸ್ತೋತ್ರಾರ್ಹನು, ಮತ್ತು ಅಲ್ಲಿ ಆತನನ್ನು ಸ್ತುತಿಸಲು ಯಾರೂ ಇರಲಿಲ್ಲ, ಹಾಗಾಗಿ ಆ ಸಮಯದಲ್ಲಿ ಆತನು ಸಂಭವನೀಯವಾಗಿರುವ ದೇವರಾಗಿದ್ದನು.) ಮತ್ತು ಆತನು ಒಂದು ನಿತ್ಯಕಾಲದ ಆತ್ಮನಾಗಿ ತಿಳಿಯಲ್ಪಟ್ಟಿದ್ದನಷ್ಟೇ. ವಧುವು ಈಗಾಗಲೇ ಆತನ ಮನಸ್ಸಿನಲ್ಲಿ ಇದ್ದಳು. ಹೌದು, ಆಕೆ ಇದ್ದಳು. ಆಕೆಯು ಆತನ ಆಲೋಚನೆಯಲ್ಲಿ ಇದ್ದಳು. ಮತ್ತು ದೇವರ ಈ ಸಂಕಲ್ಪದ ವಿಷಯವೇನು? ಅವುಗಳು ನಿತ್ಯಕಾಲಿಕವಾಗಿವೆಯಲ್ಲವೇ?

ದೇವರ ನಿತ್ಯಕಾಲದ ಸಂಕಲ್ಪ! ದೇವರ ಆಲೋಚನೆಗಳು ನಿತ್ಯಕಾಲಿಕ ವಾಗಿವೆಯೋ? ಎಂದು ನಾನು ನಿಮ್ಮನ್ನು ಕೇಳುವೆನು. ನೀನು ಇದನ್ನು ತಿಳಿದುಕೊಳ್ಳುವದಾದರೆ, ನೀನು ಅನೇಕ ಸಂಗತಿಗಳನ್ನು ತಿಳಿದುಕೊಳ್ಳುವಿ. ದೇವರು ತನ್ನ ಮೂಲಕ ಸ್ವಭಾವದಲ್ಲಿಯೂ ಆತನ ಕಾರ್ಯದಲ್ಲಿಯೂ ಎಂದೂ

ಬದಲಾಗದವನಾಗಿದ್ದಾನೆ. ನಾವು ಅದನ್ನು ಅಭ್ಯಾಸಿಸಿ ಈಗಾಗಲೇ ಅದನ್ನು ಸಾಧಿಸಿತೋರಿಸಿದ್ದೇವೆ. ದೇವರು ಆತನ ಸಾಮರ್ಥ್ಯದಲ್ಲಿ ಮೇರೆಯಿಲ್ಲದವನಾಗಿದ್ದಾನೆ. ಆದುದರಿಂದ ಆತನು ದೇವರಾಗಿದ್ದುಕೊಂಡು ಸರ್ವಜ್ಞಾನಿಯಾಗಿರಬೇಕು. ಸರ್ವಜ್ಞಾನಿಯಾಗಿರುವದಾದರೆ ಆತನು ಈಗ ಕಲಿಯುತ್ತಿಲ್ಲ, ಅಲ್ಲವೇ ತನ್ನೊಂದಿಗೆ ಸಹ ಯಾವ ಅಭಿಪ್ರಾಯವನ್ನೂ ತೆಗೆದುಕೊಳ್ಳುವದಿಲ್ಲ. ಅಥವಾ ಯಾವ ಸಮಯದಲ್ಲಿಯೂ ತನ್ನ ಜ್ಞಾನಕ್ಕೆ ಇನ್ನೇನೂ ಕೂಡಿಸುವದಿಲ್ಲ. ಆತನು ತನ್ನ ಜ್ಞಾನಕ್ಕೆ ಕೂಡಿಸಿಕೊಳ್ಳುವವನಾದರೆ, ಆಗ ಆತನು ಸರ್ವಜ್ಞಾನಿಯಲ್ಲ. ಹೆಚ್ಚೆಂದರೆ, ಕೆಲವು ಸಮಯ ಆತನು ಕೂಡಿಸುತ್ತಾನೆಂದು ನಾವು ಹೇಳಬಹುದು. ಆದರೆ ಇದು ವಾಕ್ಯಾನುಸಾರವಾಗಿಲ್ಲ. ಆತನು ಸರ್ವಜ್ಞಾನಿಯಾಗಿದ್ದಾನೆ. ಆತನು ಯಾವದಾದರೊಂದು ವಿಷಯದಲ್ಲಿ ಒಂದು ಹೊಸ ಆಲೋಚನೆಯನ್ನು ಎಂದೂ ಹೊಂದಲಿಲ್ಲ. ಯಾಕಂದರೆ ಆತನು ಎಲ್ಲಾ ಆಲೋಚನೆಗಳನ್ನು ಆತನು ಈಗಾಗಲೇ ಹೊಂದಿದ್ದನು. ಮತ್ತು ಆತನು ಎಂದೆಂದಿಗೂ ಹೊಂದಿರುವನು. ಮತ್ತು ಆತನು ಮೊದಲಿನಿಂದಲೇ ಅಂತ್ಯವನ್ನು ತಿಳಿದಿದ್ದಾನೆ. ಯಾಕಂದರೆ ಆತನು ದೇವರಾಗಿದ್ದಾನೆ. ಹೀಗಾಗಿ ದೇವರ ಸಂಕಲ್ಪಗಳು ಅವು ನಿತ್ಯವಾಗಿವೆ. ಅವು ನಿಜವಾಗಿವೆ. ತಾನು ಚಿತ್ರಿಸಿದ ಒಂದು ನಕಾಶೆಯನ್ನು ಹೊಂದಿಕೊಂಡಿರುವ ಕೇವಲ ಒಬ್ಬ ಮನುಷ್ಯನಂತೆ ಆತನ ಆಲೋಚನೆಗಳಲ್ಲ. ಮತ್ತು ಅದು ಒಂದು ದಿನ ಆಕಾರಕ್ಕೆ ಬಂದು ವಸ್ತುವಾಗುತ್ತದೆ. ಆದರೆ ದೇವರ ಸಂಕಲ್ಪಗಳು ಈಗಾಗಲೇ ನಿಜವಾದವುಗಳು ಮತ್ತು ನಿತ್ಯವಾದವುಗಳು ಮತ್ತು ಅವು ದೇವರ ಭಾಗವಾಗಿವೆ.

ಇದು ಹೇಗೆ ಕಾರ್ಯಮಾಡುತ್ತದೆಂದು ನೋಡಿರಿ. ಆದಾಮನಿಗೋಸ್ಕರವಾಗಿದ್ದ ದೇವರ ಸಂಕಲ್ಪವು ಯಾವಾಗಲೂ ಆತನೊಳಗಿತ್ತು. ಆತನ ಸಂಕಲ್ಪದಲ್ಲಿದ್ದುಕೊಂಡು, ಇನ್ನೂ ಪ್ರಕಟಮಾಡಲ್ಪಟ್ಟಿರಲಿಲ್ಲ. ಕೀರ್ತನೆ 139:15-16 ನಿಮಗೆ ಈ ವಿಷಯದಲ್ಲಿ ಸ್ವಲ್ಪ ಆಲೋಚನೆಯನ್ನು ಕೊಡುತ್ತದೆ. ನಾನು *ಗುಪ್ತ ಸ್ಥಳದಲ್ಲಿ ಏರ್ಪಡುತ್ತಾ ಭೂಗರ್ಭದಲ್ಲಿ ರಚಿಸಲ್ಪಡುತ್ತಾ ಇದ್ದಾಗ ನನ್ನ ಅಸ್ಥಿಪಂಜರವು ನಿನಗೆ ಮರೆಯಾಗಿದ್ದಿಲ್ಲ. ನಾನು ಇನ್ನೂ ಕೇವಲ ಪಿಂಡವಾಗಿರುವಾಗ ನಿನ್ನ ಕಣ್ಣುಗಳು ನನ್ನನ್ನು ನೋಡಿದವು; ನನ್ನ ಆಯುಷ್ಯಕಾಲದ ಪ್ರಥಮ ದಿನವು ಪ್ರಾರಂಭವಾಗುವ ಮೊದಲೇ ಅದರ ಎಲ್ಲಾ ದಿನಗಳು ನಿನ್ನ ಪುಸ್ತಕದಲ್ಲಿ ಬರೆಯಲ್ಪಟ್ಟವು.* ಇದು ನಾನು ಹೇಳಿದಂತೆ, ಆದಾಮನ ವಿಷಯವಾಗಿ ಎಲ್ಲಿಯೂ ಬರೆದಿರಲಿಲ್ಲ. ಆದರೆ ಆತನ ಮನಸ್ಸಿನಲ್ಲಿ ಈ ಸಂಕಲ್ಪವು ಇತ್ತು ಎಂಬುದರ ಒಂದು

ಭಾವನೆಯನ್ನು ಮತ್ತು ತಿಳುವಳಿಕೆಯನ್ನುನಿನಗೆ ಕೊಡುತ್ತದೆ. ಮತ್ತು ಆ ಸಂಕಲ್ಪವು ನಿತ್ಯಕಾಲದ್ದಾಗಿತ್ತು. ಮತ್ತು ಅದನ್ನು ವ್ಯಕ್ತಪಡಿಸಬೇಕಾಗಿತ್ತು. ಹಾಗಾಗಿ ಆದಾಮನು ಭೂಮಿಯ ಮಣ್ಣಿನಿಂದ ಉಂಟುಮಾಡಲ್ಪಟ್ಟಾಗ ಮತ್ತು ಅವನ ಆತ್ಮೀಕ ಅಸ್ಥಿತ್ವವು ದೇವರಿಂದ ಸೃಷ್ಟಿಸಲ್ಪಟ್ಟಾಗ, ಆಗ ಆದಾಮನು, ದೇವರ ಸಂಕಲ್ಪವು ವ್ಯಕ್ತಪಡಿಸಲ್ಪಟ್ಟ ವ್ಯಕ್ತಿಯಾದನು. ಮತ್ತು ಈಗ ಆ ನಿತ್ಯಕಾಲದ ಸಂಕಲ್ಪವು ಪ್ರದರ್ಶಿಸಲ್ಪಟ್ಟಿತು.

ನಾವು ಹೀಗೆಯೇ ನೂರಾರು ವರ್ಷ ಹಿಂದೆ ಹೋಗಬಹುದು. ನಾವು ಒಬ್ಬ ಮೋಶೆ, ಒಬ್ಬ ಯೆರೆಮೀಯನು, ಸ್ನಾನಿಕನಾದ ಯೋಹಾನನು ಇವರನ್ನು ಕಂಡುಕೊಳ್ಳುತ್ತೇವೆ. ಮತ್ತು ಇವರಲ್ಲಿ ಪ್ರತಿಯೊಬ್ಬರು ಅವರವರ ಸಮಯದಲ್ಲಿ ವ್ಯಕ್ತಪಡಿಸಲ್ಪಟ್ಟ ದೇವರ ನಿತ್ಯಕಾಲದ ಸಂಕಲ್ಪವಾಗಿದ್ದರು. ಆಮೇಲೆ ನಾವು ಲೋಗೋಸ್ ಆಗಿರುವ ಯೇಸುವಿನ ಕಡೆಗೆ ಬರುತ್ತೇವೆ. ಆತನಲ್ಲಿಯೇ ದೇವರ ಪರಿಪೂರ್ಣವಾದ ಮತ್ತುಸಂಪೂರ್ಣವಾದ ಸಂಕಲ್ಪವು ವ್ಯಕ್ತಪಡಿಸಲ್ಪಟ್ಟಿತು. ಮತ್ತು ಆತನು,- ವಾಕ್ಯವೆಂಬಾತನಾಗಿ ತಿಳಿಯಲ್ಪಟ್ಟನು. ಅದುವೇ ಆತನಾಗಿದ್ದಾನೆ. ಮತ್ತು ಎಂದೆಂದಿಗೂ ಇರುವನು.

ಅದು ಈಗ ಹೀಗೆ ಹೇಳುತ್ತದೆ,- ಆತನು ನಮ್ಮನ್ನು ಆತನಲ್ಲಿ (ಯೇಸುವಿನಲ್ಲಿ) ಜಗದುತ್ಪತ್ತಿಗೆ ಮೊದಲೇ ಆರಿಸಿಕೊಂಡನು. ಇದರ ಅರ್ಥವೇನೆಂದರೆ ನಾವು ನಿಜವಾಗಿ ಆತನೊಂದಿಗೆ ದೇವರ ಮನಸ್ಸಿನಲ್ಲಿ ಮತ್ತು ಸಂಕಲ್ಪದಲ್ಲಿ ಜಗದುತ್ಪತ್ತಿಗೆ ಮೊದಲೇ ಇದ್ದೆವು. ಅದು ಆರಿಸಿಕೊಂಡವರಿಗೆ ಒಂದು ನಿತ್ಯಕಾಲದ ಗುಣವನ್ನು ಕೊಡುತ್ತದೆ. ನೀನು ಅದರಿಂದ ದೂರ ಹೋಗಲಾರಿ.

ನಾನು ಇಲ್ಲೊಂದು ವಿಚಾರವನ್ನು ಒಳನುಗ್ಗಿಸುವೆನು. ನಮ್ಮ ಸ್ವಾಭಾವಿಕ ಜನ್ಮವು ಕೂಡಾ ಆರಿಸುವಿಕೆಯ ಮೇಲೆ ಆಧಾರಗೊಂಡಿದೆ. ಸ್ತ್ರೀಯ ಅಂಡಾಶಯವು ಅನೇಕಾನೇಕ ಅಂಡಗಳನ್ನು ಉತ್ಪತ್ತಿಮಾಡುತ್ತದೆ. ಆದರೆ ಕೇವಲ ನಿಶ್ಚಿತ ಸಮಯದಲ್ಲಿ, ಒಂದು ನಿಶ್ಚಿತ ಅಂಡವು ಅಲ್ಲಿ ಬರುತ್ತದೆ. ಮತ್ತು ಬೇರೆ ಯಾವದೂ ಬರಲಾರದು. ಇದು ಯಾಕಾಗಿದೆ? ಆಮೇಲೆ ಪುರುಷನ ವೀರ್ಯದಲ್ಲಿ ಯಾವ ಗೊತ್ತಿದ್ದ ಕಾರಣವಿಲ್ಲದೆ ಕೇವಲ ಒಂದು ನಿಶ್ಚಿತ ಅಣುವು ಆ ಅಂಡದೊಡನೆ ಕೂಡುತ್ತದೆ. ಮತ್ತು ಬಹಳ ಸುಲಭದಲ್ಲಿ ಒಂದರೊಡನೆ ಇನ್ನೊಂದು ಕೂಡಬಹುದಾಗಿದ್ದ ಅಥವಾ ಹಾಗೆ ಮಾಡಲು ಅವುಗಳಿಗೆ ಉತ್ತಮ ಅವಕಾಶವಿರಬಹುದಾಗಿದ್ದ ಬೇರೆ ಅಣುಗಳು ಹೇಗೆ ಮಾಡಲಸಾಧ್ಯವಾಗಿ

ನಾಶವಾದವು. ಇವೆಲ್ಲದರ ಹಿಂದೆ ಅಲ್ಲಿ ಒಂದು ಜ್ಞಾನವು ಇದೆ. ಇಲ್ಲದಿದ್ದರೆ ಆ ಮಗುವು ಗಂಡೋ ಅಥವಾ ಹೆಣ್ಣೋ, ಕೆಂಚುಕೂದಲಿನದ್ದೋ ಅಥವಾ ಕಪ್ಪು ಕೂದಲಿನದ್ದೋ, ಗಾಜಿನ ಕಣ್ಣೋ ಅಥವಾ ಕಪ್ಪು ಕಣ್ಣೋ ಇತ್ಯಾದಿಗಳನ್ನು ಯಾವದು ನಿರ್ಧರಿಸುತ್ತದೆ? ಮನಸ್ಸಿನಲ್ಲಿಯೇ ಈ ಯೋಚನೆಗಳನ್ನು ಇಟ್ಟುಕೊಂಡು ಯೆಹೋಶುವ ಮತ್ತು ಕಾಲೇಬರ ವಿಷಯ ಆಲೋಚಿಸಿರಿ. ಯೇಸುವು ಯೋಹಾನ 6:49ರಲ್ಲಿರು ಹೀಗೆ ಹೇಳಲಿಲ್ಲವೇ? ನಿಮ್ಮ ಹಿರಿಯರು ಅಡವಿಯಲ್ಲಿ ಮನ್ನಾ ತಿಂದರೂ ಸತ್ತು ಹೋದರು. ಯೇಸು ಯಾರೊಂದಿಗೆ ಮಾತಾಡುತ್ತಿದ್ದನೋ ಆ ಜನರ ಹಿರಿಯರಾಗಿ ಆ ಸತ್ತುಹೋದ ತಂದೆಗಳು, ಅಗತ್ಯವಿದ್ದರು. ಅವರು ನಾಶವಾದರು ಆದರೂ ಅವರು ಆತ್ಮೀಕ ರೀತಿಯಲ್ಲಿ ಯೆಹೋಶುವ ಮತ್ತು ಕಾಲೇಬರು ಇದ್ದಂತೆ ಸ್ವಾಭಾವಿಕ ಜನ್ಮದಲ್ಲಿ ದೇವರ ಆರಿಸುವಿಕೆಯಲ್ಲಿ ಇದ್ದರು.

ಆದರೆ ಮುಂದೆ ಹೋಗೋಣ. ಈ ಆರಿಸಲ್ಪಟ್ಟವರು ಕೇವಲ ಅವರ ನೇಮಕವಾದ ಸಮಯದಲ್ಲಿ ದೇಹಧಾರಿಯಾಗಿ ವ್ಯಕ್ತಗೊಳಿಸಲ್ಪಡಬೇಕಾದ ದೇವರ ನಿತ್ಯಕಾಲದ ಸಂಕಲ್ಪವಷ್ಟೇ ಅಲ್ಲ, ಆದರೆ ಅದೇ ಆರಿಸಲ್ಪಟ್ಟವರು ಇನ್ನೊಂದು ಹೆಸರಿನಿಂದಲೂ ಕರೆಯಲ್ಪಡುತ್ತಾರೆ. ರೋಮಾಪುರದವರಿಗೆ 4:16,- *ಆದ ಕಾರಣ ಆ ಬಾಧ್ಯತೆ ಕೃಪೆಯಿಂದಲೇ ದೊರೆಯುವಂಥದ್ದಾಗಿರುವಂತೆ ಅದು ನಂಬಿಕೆಯ ಮೂಲಕ ಸಿಕ್ಕುತ್ತದೆ. ಹೀಗೆ ಆ ವಾಗ್ದಾನವು ಅಬ್ರಹಾಮನ ಸಂತತಿಯವರೆಲ್ಲರಿಗೂ, ಅಂದರೆ ಧರ್ಮಶಾಸ್ತ್ರವನ್ನು ಆಧಾರಮಾಡಿಕೊಂಡವರಿಗೆ ಮಾತ್ರವಲ್ಲದೆ ಅಬ್ರಹಾಮನಲ್ಲಿದ್ದಂಥ ನಂಬಿಕೆಯುಳ್ಳವರಿಗೆ ಸಹ ಸ್ಥಿರವಾಗಿ* ನಿಲ್ಲುವದು. ರೋಮಾಪುರದವರಿಗೆ 9:7-13,- *ಹಾಗೆಯೇ ಅಬ್ರಹಾಮನ ವಂಶದಲ್ಲಿ ಹುಟ್ಟಿದ ಮಾತ್ರಕ್ಕೆ ಅವರೆಲ್ಲರೂ ಮಕ್ಕಳೆಂದು ಎಣಿಸಲ್ಪಡುವದಿಲ್ಲ. ಆದರೆ ಇಸಾಕನಿಂದ ಹುಟ್ಟಿದವರೇ ನಿನ್ನ ಸಂತತಿ ಅನ್ನಿಸಿಕೊಳ್ಳುವರು ಎಂದು ದೇವರು ಹೇಳಿದನು. ಆ ಮಾತಿನ ಅರ್ಥವೇನೆಂದರೆ ಶರೀರ ಸಂಬಂಧವಾಗಿ ಹುಟ್ಟಿದವರೆಲ್ಲರೂ ದೇವರ ಮಕ್ಕಳಲ್ಲ. ವಾಗ್ದಾನ ಸಂಬಂಧವಾಗಿ ಹುಟ್ಟಿದವರೇ ಅಬ್ರಹಾಮನ ಸಂತತಿಯವರೆಂದು ಎಣಿಸಲ್ಪಡುವರು ಎಂಬದು. ಮುಂದಿನ ವರುಷದ ಇದೇ ಕಾಲದಲ್ಲಿ ನಾನು ಬರುವೆನು. ಆಗ ಸಾರಳಿಗೆ ಮಗನು ಇರುವನು ಎಂಬುವ ಮಾತು ವಾಗ್ದಾನವಾಗಿದೆಯಷ್ಟೇ. ಇದು ಮಾತ್ರವಲ್ಲದೆ ರೆಬೆಕ್ಕಳು ಸಹ ನಮ್ಮ ಪಿತೃವಾದ ಇಸಾಕನಿಂದ ಅವಳಿ ಜವಳಿ ಮಕ್ಕಳಿಗೆ ಬಸುರಾದಾಗ*

*ಆದರಂತೆಯೇ ಆಯಿತು. ಆ ಮಕ್ಕಳು ಒಬ್ಬ ತಂದೆಯ ಮಕ್ಕಳಾಗಿದ್ದರೂ ಅವರು ಇನ್ನೂ ಹುಟ್ಟದೆಯೂ ಒಳ್ಳೇದನ್ನಾಗಲೀ ಕೆಟ್ಟದನ್ನಾಗಲೀ ಮಾಡದೆಯೂ ಇದ್ದಾಗ-ಹಿರಿಯನು ಕಿರಿಯನಿಗೆ ಸೇವೆಮಾಡುವನು ಎಂಬದಾಗಿ ಆಕೆಗೆ ಹೇಳಲ್ಪಟ್ಟಿತು. ಇದರಿಂದ ದೇವರು ತನಗೆ ಮನಸ್ಸಿದ್ದವರನ್ನು ಆರಿಸಿಕೊಳ್ಳುತ್ತಾನೆ ಎಂಬ ಸಂಕಲ್ಪವು ಸ್ಥಿರವಾಗಿರಬೇಕೆಂದು ತೋರಿಸಿದನು. ಆ ಸಂಕಲ್ಪವು ಪುಣ್ಯ ಕ್ರಿಯೆಗಳ ಮೇಲೆ ಆಧಾರಗೊಳ್ಳದೆ ಕರೆಯುವಾತನ ಚಿತ್ತದ ಮೇಲೆ ಆಧಾರಗೊಂಡಿದೆ. ಇದಕ್ಕನುಸಾರವಾಗಿ- ಯಾಕೋಬನನ್ನು ಪ್ರೀತಿಸಿದೆನು, ಏಸಾವನನ್ನು ದ್ವೇಷಿಸಿದೆನು ಎಂದು ಬರೆದದೆ. ಗಲಾತ್ಯದವರಿಗೆ 3:16,- ಒಳ್ಳೇದು, ದೇವರು ಅಬ್ರಹಾಮನಿಗೂ ಅವನ ಸಂತತಿಗೂ ವಾಗ್ದಾನಗಳನ್ನು ಮಾಡಿದನು. ಆತನು ನಿನ್ನ ಸಂತತಿಗಳಿಗೆ ಎಂದು ಹೇಳಿ ಅನೇಕರನ್ನು ಸೂಚಿಸದೆ ನಿನ್ನ ಸಂತತಿಗೆ ಎಂದು ಹೇಳಿ ಒಬ್ಬನನ್ನೇ ಸೂಚಿಸುತ್ತಾನೆ. ಆ ಒಬ್ಬನು ಕ್ರಿಸ್ತನೇ.* ಗಲಾತ್ಯದವರಿಗೆ 3:29,- ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನು ಸಾರವಾಗಿ ಬಾಧ್ಯರೂ ಆಗಿದ್ದೀರಿ. ರೋಮಾಪುರದವರಿಗೆ 4:16ರ ಅನುಸಾರವಾಗಿ ದೇವರು ಅಬ್ರಹಾಮನ ಎಲ್ಲಾ ಸಂತತಿಗೆ ಒಂದು ವಾಗ್ದಾನವನ್ನು ಕೊಟ್ಟಿದ್ದಾನೆಂದು ನಾವು ಕಂಡುಕೊಳ್ಳುತ್ತೇವೆ. ಮತ್ತು ಪೌಲನು ತನ್ನನ್ನು ಮತ್ತು ಎಲ್ಲಾ ವಿಶ್ವಾಸಿಗಳನ್ನು ಈ ಪದವಿಯ ಕೆಳಗೆ ಹಾಕಿದ್ದಾನೆ. ಯಾಕಂದರೆ ಅವನು - ಅಬ್ರಹಾಮನು ನಮ್ಮೆಲ್ಲರ ಪಿತೃವಾಗಿದ್ದಾನೆ ಎಂದು ಹೇಳುತ್ತಾನೆ. ಮುಂದೆ ಅವನು ತನ್ನ ವಿವರಣೆಯನ್ನು ಇನ್ನೂ ಚಿಕ್ಕದಾಗಿ ಮಾಡುತ್ತಾನೆ ಮಾತ್ರವಲ್ಲದೆ, ಅದನ್ನು ಕೊನೆಗೊಳಿಸುವದಕ್ಕೆ ಹೋಗುತ್ತಾನೆ ಯಾಕಂದರೆ ಗಲಾತ್ಯದವರಿಗೆ ಮೂರನೇ ಸಂಧಿಯಲ್ಲಿ ಅವನು ಆ ಸಂತತಿಯನ್ನು (ಏಕ ವಚನ) ಯೇಸುವಿನೊಂದಿಗೆ ಸಂಬಂಧಿಸುತ್ತಾನೆ. ಮತ್ತು ಆ ಸಂತತಿಯ ಮಕ್ಕಳನ್ನು-ವಾಗ್ದಾನದ ಮಕ್ಕಳಾಗಿ ಲೆಕ್ಕಿಸುತ್ತಾನೆ. ಮತ್ತು ಆ ವಾಗ್ದಾನವು ಆರಿಸುವಿಕೆಗೆ ಸಂಬಂಧಪಟ್ಟಿದೆ. ಅಥವಾ ದೇವರ ಆರಿಸುವಿಕೆಗೆ ಸಂಬಂಧಪಟ್ಟಿದೆ. ಮತ್ತು ಅದುವೇ ನಿಜವಾಗಿ ನಾವು ಹೇಳುತ್ತಿರುವಂಥಾದ್ದು. ಈ ರಾಜನ ಸಂತಾನವಾಗಿರುವವರು ದೇವರು ಆರಿಸಿಕೊಂಡವರು. ಮುನ್ನೇಮಿಸಲ್ಪಟ್ಟವರು. ದೇವರು ಅವರನ್ನು ಮೊದಲೇ ತಿಳಿದಿದ್ದನು. ಮತ್ತು ಅವರು ದೇವರ ಸಂಕಲ್ಪದಲ್ಲಿ ಮತ್ತು ಆತನ ಯೋಚನೆಯಲ್ಲಿ ಇದ್ದರು. ಬಹಳ ಸರಳವಾದ ಮಾತುಗಳಲ್ಲಿ ಹೇಳುವದಾದರೆ, ಕ್ರಿಸ್ತನ ನಿಜ ವಧುವು ಪ್ರತಿಯೊಬ್ಬನು ನಿಶ್ಚಿತವಾದ, ನಿರ್ಣಯಮಾಡಿದ ಸಮಯದಲ್ಲಿ ಬಂದು ಅಲ್ಲಿಯ ವರೆಗೆ

ವ್ಯಕ್ತಗೊಳಿಸಲ್ಪಡದಿದ್ದರೂ ದೇವರ ಯೋಚನೆಯಲ್ಲಿ ಆದ್ಯಂತಕಾಲದಲ್ಲಿಯೂ ನಿತ್ಯಕಾಲದಲ್ಲಿಯೂ ಇದ್ದಳು. ಪ್ರತೀ ಸದಸ್ಯನು ಬಂದಾಗ, ಅದು ವ್ಯಕ್ತಗೊಳಿಸಲ್ಪಟ್ಟಿತು. ಮತ್ತು ಆ ದೇಹದಲ್ಲಿ ತನ್ನ ಸ್ಥಳವನ್ನು ತೆಗೆದುಕೊಂಡಿತು. ಹಾಗಾಗಿ ಈ ವಧುವು ನಿಜವಾದ ಅಕ್ಷರಶಃ- ಮಾತಾಡಿದ ವಾಕ್ಯದ ಬೀಜವಾದ ವಧುವಾಗಿದ್ದಾಳೆ. ಮತ್ತು ಅವಳು ಪದವಿಯಲ್ಲಿ ಸ್ತ್ರೀಯಾಗಿ ಕರೆಯಲ್ಪಟ್ಟರೂ, ಆಕೆಯು ಕ್ರಿಸ್ತನ ದೇಹವೆಂದೂ ಕರೆಯಲ್ಪಟ್ಟಿದ್ದಾಳೆ. ಆಕೆಯು ಹಾಗೆ ಕರೆಯಲ್ಪಡಬೇಕೆಂಬದು ಬಹಳ ಸಹಜವಾಗಿ ಕಾಣುತ್ತದೆ. ಯಾಕಂದರೆ ಆಕೆಯು ಆತನಲ್ಲಿ ಮುನ್ನೇಮಿಸಲ್ಪಟ್ಟಿದ್ದಾಳೆ. ಅದೇ ಮೂಲ ಸ್ಥಾನದಿಂದ ಬಂದವಳು, ಆತನೊಂದಿಗೆ ಎಂದೆಂದೂ ಇದ್ದವಳಾಗಿದ್ದಳು. ಮತ್ತು ಈಗ ದೇವರನ್ನು ಅನೇಕ ಸದಸ್ಯರಿರುವ ದೇಹದಲ್ಲಿ ಪ್ರದರ್ಶಿಸುತ್ತಾಳೆ. ಮತ್ತು ಒಂದು ಸಾರೆ, ದೇವರ ಒಂದೇ ಸದಸ್ಯನಲ್ಲಿ, ಅಂದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ಪ್ರದರ್ಶಿಸಲ್ಪಟ್ಟನು.

ಹಾಗಾದರೆ ಈಗ, ನಾವು ಇಲ್ಲಿ ಒಂದು ತೀರ್ಮಾನಕ್ಕೆ ಬರುತ್ತಿದ್ದೇವೆ. ಆ ನಿತ್ಯಕಾಲದ ಲೋಗೋಸ್(ದೇವರು) ಮಗನಲ್ಲಿ ಪ್ರಕಟವಾದದ್ದರಿಂದ, ಮತ್ತು ಯೇಸುವಿನ ದೇಹದಲ್ಲಿ ದೇವರ ಸರ್ವಸಂಪೂರ್ಣತೆಯು ವಾಸವಾಗಿದ್ದದರಿಂದ, ಮತ್ತು ಆ ನಿತ್ಯನಾದಾತನು, ದೇಹಧಾರಿಯಾದಂತ ತಂದೆಯಾಗಿದ್ದು ಮತ್ತು ಈ ರೀತಿಯಲ್ಲಿ ಮಗನೆಂಬ ಪದವಿಯನ್ನು ಹೊಂದಿದ್ದರಿಂದ ಅದೇ ರೀತಿಯಲ್ಲಿ ನಾವು ಸಹ ಆತನ ಸಂಕಲ್ಪದಲ್ಲಿ ನಿತ್ಯರಾಗಿದ್ದುಕೊಂಡು ನಮ್ಮ ಪಾಲಿಗೆ ಅನೇಕ ಸದಸ್ಯರಿಂದ ಕೂಡಿದ ನುಡಿಯಲ್ಪಟ್ಟಂಥ ವಾಕ್ಯದ ಬೀಜವಾದೆವು. ದೇಹದಲ್ಲಿ ಪ್ರಕಟವಾದೆವು. ಮತ್ತು ನಾವು ಕೂಡಾ ಆ ರೀತಿ ಕರೆಯಲ್ಪಡುವಂತೆ ಆ ನಿತ್ಯಕಾಲದ ಸಂಕಲ್ಪಗಳು ಈಗ ಶರೀರದಲ್ಲಿ ಪ್ರದರ್ಶಿಸಲ್ಪಟ್ಟು ದೇವರ ಪುತ್ರರಾಗಿದ್ದೇವೆ. (ನಾವು ಹೊಸದಾಗಿ ಹುಟ್ಟಿದ್ದರಿಂದ ಆತನ ಸಂತತಿಯಾಗಲಿಲ್ಲ, ನಾವು ಬೀಜವಾಗಿದ್ದು ದರಿಂದ ಹೊಸದಾಗಿ ಹುಟ್ಟಿದೆವು. ಯಾಕಂದರೆ ಕೇವಲ ಆರಿಸಿಕೊಂಡವರು ಮಾತ್ರ ಹೊಸದಾಗಿ ಹುಟ್ಟಲು ಸಾಧ್ಯವಿದೆ. ನಾವು ಬೀಜವಾಗಿದ್ದೆವು. ಆದುದರಿಂದಲೇ ನಾವು ಪುನರ್ ಜೀವನವನ್ನು ಹೊಂದಲು ಕಾರಣವಾಯಿತು. ಬೀಜವಲ್ಲದೆ ಇರುವದರಲ್ಲಿ ಅಲ್ಲಿ ಪುನರ್ ಜೀವನವನ್ನು ಹೊಂದಲು ಏನೂ ಇರುವದಿಲ್ಲ.)

ಇದನ್ನು ಜಾಗರೂಕರಾಗಿ ಮನಸ್ಸಿನಲ್ಲಿ ಇಟ್ಟುಕೊಳ್ಳಿರಿ. ಈಗ ಮುಂದಿನ ವಿಷಯವನ್ನು ತೆಗೆದುಕೊಳ್ಳೋಣ. ಬಿಡುಗಡೆಗೊಳಿಸುವದೆಂದರೆ ಕ್ರಯಕೊಟ್ಟು

ಹಿಂದಕ್ಕೆ ಪಡೆಕೊಳ್ಳುವದಾಗಿದೆ. ಅದು ಅದರ ಮೂಲ ಯಜಮಾನನಿಗೆ ತಿರಿಗಿ ಹಿಂದೆ ಕೊಡಲ್ಪಡುವದು. ದೇವರು ಆತನ ಮರಣದ ಮೂಲಕ (ಆತನು) ಸುರಿಸಿದ ರಕ್ತದ ಮೂಲಕ ತನ್ನ ಸ್ವಂತದ್ದನ್ನು ಕ್ರಯಕೊಟ್ಟು ಹಿಂದೆ ಪಡಕೊಂಡನು. ಆತನು ಮಾತಾಡಿದ ವಾಕ್ಯ ಬೀಜವಾದ ವಧುವನ್ನು ಹಿಂದಕ್ಕೆ ಪಡಕೊಂಡನು. ನನ್ನ ಕುರಿಗಳು ನನ್ನ ಸ್ವರ(ವಾಕ್ಯ)ಕ್ಕೆ ಕಿವಿಗೊಡುತ್ತವೆ. ಮತ್ತು ಅವು ನನ್ನನ್ನು ಹಿಂಬಾಲಿಸುತ್ತವೆ. ನೀನು ಯಾವಾಗಲೂ ಒಂದು ಕುರಿಯಾಗಿದ್ದೀ. ಎಂದೂ ನೀನು ಹಂದಿಯಾಗಲಿ, ನಾಯಿಯಾಗಲೀ ತಿರುಗಿಕೊಂಡ, ಕುರಿಯಾಗಿರಲಿಲ್ಲ. ಅದು ಸಾಧ್ಯವಾಗಿರುವದಿಲ್ಲ. ಯಾಕಂದರೆ ಪ್ರತಿಯೊಂದು ಜಾತಿಯ ಜೀವವು ಅದೇ ಜಾತಿಯ ಜೀವವನ್ನುತ್ಪತ್ತಿ ಮಾಡುತ್ತದೆ. ಮತ್ತು ಅಲ್ಲಿ ಯಾವ ಜಾತಿಯಲ್ಲಿಯೂ ಯಾವ ಬದಲಾವಣೆಯೂ ಇರುವದಿಲ್ಲ. ನಾವು ದೇವರ ಸಂಕಲ್ಪದಲ್ಲಿ ಇದ್ದ ಮತ್ತು ನಂತರ ಶರೀರದಲ್ಲಿ ವ್ಯಕ್ತಮಾಡಲ್ಪಟ್ಟಂತೆ ಆತನ ವಾಕ್ಯ(ಸ್ವರ)ವನ್ನು ಕೇಳುವ ಒಂದು ದಿನವು ಬರಬೇಕಾಗಿತ್ತು. ಮತ್ತು ಆ ಸ್ವರವನ್ನು ಕೇಳುವಾಗ ನಮ್ಮನ್ನು ನಮ್ಮ ತಂದೆಯು ಕರೆಯುತ್ತಾನೆಂದು ನಾವು ಕಂಡುಕೊಳ್ಳುತ್ತೇವೆ. ಮತ್ತು ನಾವು ದೇವರ ಮಕ್ಕಳೆಂದು ಗುರುತು ಹಿಡಿಯುತ್ತೇವೆ. ನಾವು ಆತನ ಸ್ವರವನ್ನು ಕೇಳಿದೆವು. ಮತ್ತು ತಪ್ಪಿಹೋದ ಮಗನು ಮಾಡಿದಂತೆ,- ಓ ನನ್ನ ತಂದೆಯೇ, ನನ್ನನ್ನು ರಕ್ಷಿಸು. ನಾನು ನಿನ್ನ ಕಡೆಗೆ ಹಿಂತಿರುಗುತ್ತೇನೆ ಎಂದು ಕೂಗಿಕೊಂಡೆವು.

ಒಬ್ಬ ದೇವರ ಮಗನು, ತಾನು ಮಗನೆಂದು ಗುರುತಿಸಿಕೊಳ್ಳುವ ಮೊದಲು ಬಹಳ ಸಮಯ ಹಾಗೆಯೇ (ಲೋಕದಲ್ಲಿ) ಇರಲು ಸಾಧ್ಯವಿದೆ. ನಿಜವಾಗಿ ಅನೇಕ ನಿಜ ಕ್ರೈಸ್ತರು ಒಂದು ಹೇಟೆಯ ಕೆಳಗೆ ಕಾವಿಗಿಟ್ಟ ಒಂದು ಹದ್ದಿನ ಮರಿಯ ಕಥೆಯಂತಿರುತ್ತಾರೆ. ಹದ್ದು ಒಂದು ನಿಜ ವಿಶ್ವಾಸಿಯ ದರ್ಶಕವಾಗಿದೆ ಎಂದು ನಿಮಗೆ ತಿಳಿದದೆ. ಸರಿ, ಒಬ್ಬ ರೈತನು ಒಂದು ಹದ್ದಿನ ಗೂಡಿನಿಂದ ಒಂದು ಮೊಟ್ಟೆಯನ್ನು ತೆಗೆದುಕೊಂಡು ಅದನ್ನು ಒಂದು ಹೇಟೆಯ ಕೆಳಗೆ ಇಟ್ಟನು. ತಕ್ಕ ಸಮಯದಲ್ಲಿ ಆ ಹೇಟೆಯ ಕೆಳಗಿದ್ದ ಎಲ್ಲಾ ಮೊಟ್ಟೆಗಳು ಒಡೆದು ಮರಿಗಳಾದವು. ಕೋಳಿಯ ಮರಿಗಳು ತಾಯಿ ಹೇಟೆಯೊಂದಿಗೆ ಬಹು ಚೆನ್ನಾಗಿ ಸಂತೋಷದಿಂದಿದ್ದವು. ಆದರೆ ಆ ಚಿಕ್ಕ ಹದ್ದಿನ ಮರಿಯು ಆ ಗೊಬ್ಬರದ ರಾಶಿಯಲ್ಲಿ ಆಹಾರಕ್ಕೋಸ್ಕರ ಕೆದರುವದನ್ನು ಮತ್ತು ಆ ಹೇಟೆಯ ಕೂಗನ್ನು ಅರ್ಥಮಾಡಿಕೊಳ್ಳಲು ಅಶಕ್ತವಾಯಿತು. ಅದು ಹೇಗೋ ಜೀವಿಸಲು

ಪ್ರಾರಂಭಮಾಡಿತು. ಆದರೆ ಇದೆಲ್ಲದರ ವಿಷಯವಾಗಿ ಅದು ಗಲಿಬಿಲಿಗೊಂಡಿತು. ಆದರೆ ಒಂದು ದಿನ ಆಕಾಶದಲ್ಲಿ ಬಹಳ ಮೇಲಿನಿಂದ, ಆ ಮೊಟ್ಟೆಯನ್ನು ಇಟ್ಟಿದ್ದ ತಾಯಿ ಹದ್ದು, ನೆಲದಲ್ಲಿರುವ ಆ ಚಿಕ್ಕ ಹದ್ದಿನ ಮರಿಯನ್ನು ಗುಪ್ತವಾಗಿ ಕಂಡು ಹಿಡಿಯಿತು. ಆಕೆ ಅತಿರೇಕವಾದ ವೇಗದಿಂದ ಕೆಳಗೆ ಎರಗಿದಳು ಮತ್ತು ಗಟ್ಟಿಯಾದ ಧ್ವನಿಯಿಂದ ಆ ಮರಿಗೆ ಮೇಲೆ ಹಾರಿ ತನ್ನನ್ನು ಸಂಧಿಸಲು ಕೂಗಿ ಹೇಳಿದಳು. ಅವನು ಒಂದು ಹದ್ದು ಕೂಗುವದನ್ನು ಎಂದೂ ಕೇಳಿರಲಿಲ್ಲ. ಆದರೆ ಆ ಮೊದಲ ಕೂಗನ್ನು ಕೇಳಿದಾಗ ಅವನಲ್ಲಿ ಏನೋ ಒಂದು ಕೆದರಿತು ಮತ್ತು ಅವನು ತಾಯಿಯತ್ತ ಹಾರಿಹೋಗಲು ಬಯಸಿದನು. ಆದರೆ ಹಾಗೆ ಪ್ರಯತ್ನಮಾಡಲು ಅವನು ಭಯಪಟ್ಟನು. ಪುನಃ ಆ ತಾಯಿಯು ಗಾಳಿಯಲ್ಲಿ ಏರಿ ಆಕೆಯನ್ನು ಹಿಂಬಾಲಿಸಬೇಕೆಂದು ಕೂಗಿ ಹೇಳಿದಳು. ತಾನು ಭಯಪಡುತ್ತಿದ್ದೇನೆಂದು ಅವನು ಕೂಗಿ ಹೇಳಿದನು. ಆಕೆಯು ಅವನಿಗೆ ಪುನಃ ಪ್ರಯತ್ನಮಾಡು ಎಂದು ಕೂಗಿ ಕರೆದು ಹೇಳಿದಳು. ತನ್ನ ರೆಕ್ಕೆಗಳನ್ನು ಬಡಿಯುತ್ತಾ ಅವನು ತನ್ನನ್ನು ತಾನು ಆಕಾಶಕ್ಕೆ ಬಲವಾಗಿ ಎಸೆದುಕೊಂಡನು, ಮತ್ತು ತಾಯಿಯ ಕೂಗಿಗೆ ಉತ್ತರಿಸುತ್ತಾ ಅವನು ನೀಲ ಆಕಾಶದ ಕಡೆಗೆ ಮೇಲಕ್ಕೇರಿದನು. ಅವನು ಯಾವಾಗಲೂ ಹದ್ದೇ ಆಗಿದ್ದನು ಎಂದು ನೀವು ತಿಳಿದಿದ್ದೀರಿ. ಸ್ವಲ್ಪ ಸಮಯಕ್ಕೋಸ್ಕರ ಅವನು ಕೋಳಿಯಂತೆ ವರ್ತಿಸಿದನು, ಆದರೆ ಅವನಿಗೆ ಅದರಿಂದ ತೃಪ್ತಿಯಾಗಲಿಲ್ಲ. ಆದರೆ ಅವನು ಆ ಮಹಾ ಹದ್ದಿನ ಕರೆಯನ್ನು ಕೇಳಿದಾಗ ಅವನು ತನ್ನ ಸ್ವಂತ ಸ್ಥಳದ ಕಡೆಗೆ ಬಂದನು. ಒಂದು ಸಾರಿ ದೇವರ ನಿಜವಾದ ಮಗನು, ಆತ್ಮನ ಕೂಗನ್ನು ದೇವರ ವಾಕ್ಯದ ಮೂಲಕವಾಗಿ ಕೇಳುವದಾದರೆ, ಅವನು ಸಹ ತಾನು ಯಾರೆಂದು ಕಂಡುಕೊಳ್ಳುವನು. ಮತ್ತು ಆ ಮಹಾ ಪ್ರವಾದಿ ಹದ್ದಿನ ಕಡೆಗೆ ಓಡುವನು. ಮತ್ತು ಅವನೊಂದಿಗೆ ಎಂದೆಂದಿಗೂ ಪರಲೋಕ ಸ್ಥಾನದಲ್ಲಿ ಯೇಸು ಕ್ರಿಸ್ತನೊಂದಿಗೆ ಕೂತುಕೊಂಡಿರುವನು.

ಈ ಪವಿತ್ರಾತ್ಮನ ದೀಕ್ಷಾಸ್ನಾನದ ಮೇಲೆ **ಈಗ ನಮ್ಮ ವಿಜಯೋತ್ಸವದ ಕಲಶದ ಕಲ್ಲು (Head tone) ಬರುತ್ತದೆ.** ಗಲಾತ್ಯದವರಿಗೆ 4:4-7,- *ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಧರ್ಮ ಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ ಪುತ್ರರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ*

*ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು. ನೀವು ಪುತ್ರರಾಗುವದರಿಂದ ದೇವರು ಅಪ್ಪಾ ತಂದೆಯೇ ಎಂದು ಕೂಗುವ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು. ಹೀಗಿರುವಲ್ಲಿ ಇನ್ನು ನೀನು ದಾಸನಲ್ಲ, ಮಗನಾಗಿದ್ದೀ. ಮಗನೆಂದ ಮೇಲೆ ದೇವರ ಮೂಲಕ ಬಾಧ್ಯನೂ ಆಗಿದ್ದೀ.* ಅದು ಅಲ್ಲಿದೆ. ಯೇಸು ಕ್ರಿಸ್ತನು ಬಂದನು, ಕ್ರೂಜೆಯ ಮೇಲೆ ಸತ್ತನು; ಮತ್ತು ರಕ್ಷಣೆಯನ್ನು ಪರಿಪೂರ್ಣಗೊಳಿಸಿದನು. (ಕ್ರಯಕ್ಕೆ ತೆಗೆದುಕೊಳ್ಳುವದರ ಮೂಲಕ ಮೂಲ ಯಜಮಾನನಿಗೆ ಹಿಂದೆ ಕೊಡುವಂಥಾದ್ದು ಅಥವಾ ಕ್ರಯ ಕೊಡುವಂಥಾದ್ದು) ಅದರ ಮೂಲಕ **ನಮ್ಮನ್ನು ಪುತ್ರರನ್ನಾಗಿ ಪ್ರತಿಷ್ಠಿಸಿದನು.** ಆತನು ನಮ್ಮನ್ನು ಪುತ್ರರನ್ನಾಗಿ ಮಾಡಲಿಲ್ಲ. ಯಾಕಂದರೆ ನಾವು ಮೊದಲೇ ಆತನ ಮಕ್ಕಳಾಗಿದ್ದೆವು. ಆದರೆ ಆತನು ನಮ್ಮನ್ನು ಪುತ್ರರನ್ನಾಗಿ ಪ್ರತಿಷ್ಠಿಸಿದನು. ನಾವು ಸೈತಾನನಿಂದ ಬಂಧನದಲ್ಲಿ ಹಾಕಲ್ಪಟ್ಟಿದ್ದೆವು. ಆದರೂ ನಾವು ಪುತ್ರರೇ ಆಗಿದ್ದೆವು. ಇದನ್ನು ಕೇಳಿರಿ,- **ಮತ್ತು ನೀವು ಪುತ್ರರಾಗಿರುವದರಿಂದ, ದೇವರು ತನ್ನ ಮಗನ ಆತ್ಮನನ್ನು ನಿಮ್ಮ ಹೃದಯದೊಳಗೆ ಕಳುಹಿಸಿದನು, ಆದರಿಂದ ನೀವು ತಂದೆಯೇ, ತಂದೆಯೇ ಎಂದು ಕೂಗುತ್ತೀರಿ.** ಪಂಚಾಶತ್ತಮ ದಿನದಲ್ಲಿ ಆತ್ಮವು ಯಾರಮೇಲೆ ಇಳಿದು ಬಂದಿತ್ತು? ಪುತ್ರರ ಮೇಲೆ. ಕೊರಿಂಥದಲ್ಲಿ? ಪುತ್ರರ ಮೇಲೆ- **ಅವರು ವಾಕ್ಯವನ್ನು ಕೇಳಿದಾಗ.**

ಪವಿತ್ರಾತ್ಮನ ದೀಕ್ಷಾಸ್ನಾನವೆಂದರೇನು? ಅದು ಆತ್ಮನು ನಿನ್ನನ್ನು ಕ್ರಿಸ್ತನ ದೇಹದೊಳಗೆ ದೀಕ್ಷಾಸ್ನಾನಮಾಡಿಸುವದೇ ಆಗಿದೆ. ಅದು ಹೊಸ ಜನ್ಮ (ಪುನರ್ ಜನ್ಮ)ವಾಗಿದೆ. ನೀನು ವಾಕ್ಯವನ್ನು ಕೇಳಿದನಂತರ ಪಶ್ಚಾತ್ತಾಪಪಟ್ಟು ಒಳ್ಳೇ ಮನಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಂಡು ಮತ್ತು ನೀರಿನ ದೀಕ್ಷಾಸ್ನಾನ ಹೊಂದಿದನಂತರ ದೇವರಾತ್ಮವು ಬಂದು ತುಂಬಿಕೊಳ್ಳುವದೇ ಆಗಿದೆ.

ದೈವತ್ವದ ಏಕತ್ವದ ಸಿದ್ಧಾಂತವನ್ನು ಎಲ್ಲರೂ ನಂಬುವವರಾದರೆ, ನಾವು ಈಗ ತಾನೇ ಹೇಳಿದ್ದನ್ನು ಎಲ್ಲರೂ ಗ್ರಹಿಸಿಕೊಳ್ಳುವದು ಬಹಳಷ್ಟು ಸುಲಭವಾಗುತ್ತಿತ್ತು. ಯಾಕಂದರೆ ಅಲ್ಲಿ ದೈವತ್ವದಲ್ಲಿ ಮೂರು ವ್ಯಕ್ತಿಗಳಿಲ್ಲ. ಆದರೆ **ಒಬ್ಬನೇ** ಹೀಗಾಗಿ ನಾವು ಯೇಸುವಿನ ಜೀವದ ಆತ್ಮವು ನಮ್ಮೊಳಗೆ ಬರುವದರಿಂದ ನಾವು ಪುನರ್ ಜನ್ಮ ಹೊಂದಲ್ಪಟ್ಟು ಮತ್ತು ನಂತರ ಕೂಡಲೇ ನಮಗೆ ಸಾಮರ್ಥ್ಯವನ್ನು ಕೊಡಲು ಪವಿತ್ರಾತ್ಮನು ನಮ್ಮೊಳಗೆ ಬರುವನು; ಹೀಗಲ್ಲ.

ಅದು ಸತ್ಯವಾಗಿದ್ದಿದ್ದರೆ. ನಾವು ನಮ್ಮ ಸಂಪೂರ್ಣ ರಕ್ಷಣೆಯಲ್ಲಿ ಆತನಿಗೆ (ತಂದೆ ದೇವರಿಗೆ) ಒಂದು ಭಾಗವನ್ನು ಕೊಡದೆ ತಂದೆಯನ್ನು ಯಾಕೆ ಅಪಮಾನ ಪಡಿಸುತ್ತೇವೆ? ಯಾಕಂದರೆ ರಕ್ಷಣೆಯು ಕರ್ತನದ್ದಾಗಿದ್ದರೆ, ಮತ್ತು ಅಲ್ಲಿ ಮೂರು ಕರ್ತರು ಇರುವದಾಗಿದ್ದರೆ ಆಗ ಆತನು (ತಂದೆ) ಸಹ ಇದರಲ್ಲಿ ಒಂದು ಪಾಲನ್ನು ತೆಗೆದುಕೊಂಡಿರಲೇಬೇಕು. ಮತ್ತು ಆತನೇ ಮತ್ತು ಆತನೊಬ್ಬನೇ ದೇವರಾಗಿದ್ದಾನೆ ಮತ್ತು ಆತನು ಮತ್ತು ಆತನೊಬ್ಬನೇ ವಿಶ್ವಾಸಿಯೊಳಗೆ ಬರುವಾತನು ಎಂದು ಯೇಸು ಇದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾನೆಂದು ನಾವು ಸ್ಪಷ್ಟವಾಗಿ ನೋಡುತ್ತೇವೆ. ಯೋಹಾನ 14:16ರಲ್ಲಿ ತಂದೆಯು ಇನ್ನೊಬ್ಬ ಸಹಾಯಕನನ್ನು ಕಳುಹಿಸುವನು ಎಂದು ಹೇಳುತ್ತದೆ. ಆದರೆ 17ಯ ವಚನವು, ಆತನು (ಯೇಸು) ಅವರೊಂದಿಗೆ ವಾಸಿಸುತ್ತಾನೆ, ಮತ್ತು ಮುಂದೆ ಅವರ ಅಂತರ್ಯದಲ್ಲಿ ಇರುವನು ಎಂದು ಹೇಳುತ್ತದೆ. 18ನೆಯ ವಚನದಲ್ಲಿ ಆತನು, ತಾನು ಅವರಲ್ಲಿಗೆ (ಅವರೊಳಗೆ) ಬರುವೆನು ಎಂದು ಹೇಳುತ್ತಾನೆ. 23ನೇ ವಚನದಲ್ಲಿ ಶಿಷ್ಯರೊಂದಿಗೆ ಮಾತಾಡುತ್ತಾ ಆತನು,- ನಾವು (ತಂದೆ ಮತ್ತು ಮಗನು) ಅವನೊಳಗೆ ಬರುವೆವು ಎಂದು ಹೇಳಿದ್ದಾನೆ. ಹೀಗಾಗಿ ಅದು ತಂದೆ, ಮಗ ಮತ್ತು ಪವಿತ್ರಾತ್ಮ ಎಲ್ಲರೂ ಒಂದೇ ಸಮಯದಲ್ಲಿ ಒಳಗೆ ಬರುವಂಥಹದು, ಯಾಕಂದರೆ ದೈವತ್ವದಲ್ಲಿ ಅಲ್ಲಿ **ಒಂದೇ ವ್ಯಕ್ತಿಯು ಇದ್ದಾನೆ.** ಈ ಆಗಮನವು ಪಂಚಾಶತ್ತಮ ದಿನದಲ್ಲಿ ಸಂಭವಿಸಿತು. ಅಲ್ಲಿ ಆತ್ಮನ ಎರಡು ಬರೋಣಗಳು ಇಲ್ಲ. ಕೇವಲ ಒಂದೇ ಒಂದು ಇದೆ. ಸಮಸ್ಯೆ ಏನೆಂದರೆ ಜನರಿಗೆ ನಿಜವಾದ ಸತ್ಯವು ತಿಳಿದಿಲ್ಲ. ಮತ್ತು ಅವರು ಕೇವಲ ಪಾಪದ ಪರಿಹಾರಕ್ಕಾಗಿ ಯೇಸುವಿನ ಮೇಲೆ ವಿಶ್ವಾಸವಿಡುತ್ತಾರೆ. ಆದರೆ ಆತ್ಮನನ್ನು ಸ್ವೀಕರಿಸಲು ಮುಂದೆ ಹೋಗುವದಿಲ್ಲ.

ಈ ವಿಷಯವನ್ನು ನಾನು ಮುಕ್ತಾಯಗೊಳಿಸುವ ಮೊದಲು, ನಿಮ್ಮ ಮನಸ್ಸಿನಲ್ಲಿ ಒಂದು ಪ್ರಶ್ನೆ ಇದೆ ಎಂದು ನನಗೆ ತಿಳಿದದೆ. ನಾನು ಪೂರ್ವ ಅಸ್ತಿತ್ವ ಎಂಬ ಸಿದ್ಧಾಂತವನ್ನು ನಂಬುತ್ತೇನೋ ಎಂದು ತಿಳಿಯಲು ನೀವು ಅಪೇಕ್ಷಿಸುತ್ತೀರಿ. ಹೇಗೆ ಪುನರವತಾರ(ಅವತಾರವೆತ್ತುವದು) ಅಥವಾ ಆತ್ಮಗಳು ಒಂದು ದೇಹದಿಂದ ಹೋಗಿ ಇನ್ನೊಂದು ದೇಹಕ್ಕೆ ಪ್ರವೇಶಿಸುವದನ್ನು (ಪರಕಾಯ ಪ್ರವೇಶ) ನಾನು ನಂಬುವದಿಲ್ಲವೋ ಅದೇ ರೀತಿಯಾಗಿ ಆ ಮೋರ್ಮೊನ್ ಸಿದ್ಧಾಂತವಾದ ಆತ್ಮಗಳ ಪೂರ್ವ ಅಸ್ತಿತ್ವವನ್ನೂ ನಾನು ನಂಬುವದಿಲ್ಲ. ಇಲ್ಲಿ ಬಹಳ ಜಾಗರೂಕರಾಗಿ ಇದನ್ನು ನೋಡಿರಿ. ಅದು ಒಬ್ಬ ವ್ಯಕ್ತಿಯು ನಿತ್ಯಕಾಲಕ್ಕೆ

ಮುನ್ನೇಮಿಸಲ್ಪಟ್ಟು ದೇವರ ಬಳಿಯಿಂದ ಇಲ್ಲಿ ಬರುವಂಥದ್ದಲ್ಲ, **ಅದು ವಾಕ್ಯ ಅಥವಾ ಬೀಜವಾಗಿದೆ.** ಅದುವೇ ಅದು. ಅಲ್ಲಿ ಬಹಳ ಹಿಂದೆ, ಮನುಷ್ಯನ ಆಲೋಚನೆಗೆ ನಿಲುಕದಷ್ಟು ಬಹಳ ಹಿಂದಿನ ಕಾಲದಲ್ಲಿ, ನಿತ್ಯವಾದ ದೇವರು, ನಿತ್ಯಕಾಲದ ಸಂಕಲ್ಪದಿಂದ ಆಲೋಚಿಸಿ ನಿರ್ಣಯಿಸಿದನು. ನಾನು *ಯಾಕೋಬನನ್ನು ಪ್ರೀತಿಸಿದೆನು, ಆದರೆ ಏಸಾವನನ್ನು ದ್ವೇಷಿಸಿದೆನು.* (ರೊಮಾಪುರದವರಿಗೆ 9:13) ಮತ್ತು ಇಬ್ಬರೂ ಹುಟ್ಟಿರಲಿಲ್ಲ, ಅವರಿಬ್ಬರೂ ಯಾವ ಒಳ್ಳೇದನ್ನಾಗಲೀ ಕೆಟ್ಟದನ್ನಾಗಲೀ ಮಾಡಿರಲಿಲ್ಲ. ನೋಡಿರಿ. ಅದು ಯೋಚನೆಯಾಗಿತ್ತು. ಮತ್ತು ಆ ಯೋಚನೆಯು ವ್ಯಕ್ತಗೊಳಿಸಲ್ಪಟ್ಟಿತು. ಮತ್ತು ದೇವರು ಯಾಕೋಬನನ್ನು ಹಿಂದೆ ಕ್ರಿಯಕ್ಕೆ ಕೊಂಡುಕೊಂಡನು. ಯಾಕೆಂದರೆ ಯಾಕೋಬನು ಮಾತ್ರವೇ ಆ ಬೀಜವಾಗಿದ್ದನು. ಅವನಲ್ಲಿ ಮಾತ್ರವೇ ಆ ಬೀಜವಿತ್ತು. ಈ ಕಾರಣದಿಂದಲೇ ಚೊಚ್ಚಲ ತನದ ಹಕ್ಕನ್ನು ಅವನು ಸನ್ಮಾನಿಸಿದನು. ಮತ್ತು ದೇವರ ಒಡಂಬಡಿಕೆಯನ್ನು ಗೌರವಿಸಿದನು. ನೀನು ನಿಜವಾದ ಬೀಜವಾಗಿದ್ದರೆ - ನೀನು ದೇವರ ವಾಕ್ಯವನ್ನು ಕೇಳುವಿ. ಆತ್ಮನು ನಿನ್ನನ್ನು ಕ್ರಿಸ್ತನ ದೇಹದೊಳಗೆ ದೀಕ್ಷಾಸ್ನಾನಮಾಡಿಸುವನು. ನಿನ್ನನ್ನು ತುಂಬಿಸಿ ಮತ್ತು ಸಾಮರ್ಥ್ಯವನ್ನು ಕೊಡುವನು. ಮತ್ತು ನಿನ್ನ ಯುಗ ಮತ್ತು ದಿನಕ್ಕಾಗಿರುವ ಆ ದೇವರ ವಾಕ್ಯವನ್ನು ನೀನು ಅಂಗೀಕರಿಸುವಿ. ನಿನಗೆ ವಾಕ್ಯವು ಪ್ರಕಟಮಾಡಲ್ಪಟ್ಟಾಗ ಆ ನಿಜವಾದ ರುಜುವಾತು ಎಷ್ಟು ಸ್ಪಷ್ಟವಾಗುತ್ತದೆಂದು ನೋಡು. ಪುನಃ ಲಕ್ಷ್ಯವಿಡು. ಯೇಸು ರಾಜಸಂತಾನವಾಗಿದ್ದನು. ಆತನು ಬಂದು ಮನುಷ್ಯ ದೇಹದಲ್ಲಿ ವಾಸವಾಗಿದ್ದನು. ಆತ್ಮನು ಆತನನ್ನು ಕರೆದಾಗ (ವಾಕ್ಯವಾಗಿ ಪ್ರಕಟಿಸಲ್ಪಟ್ಟ ಆ ಯೋಚನೆ) ಆತನು ಯೋರ್ದಾನಿಗೆ ಹೋಗಿ ಮತ್ತು ಅಲ್ಲಿ ನೀರಿನ ದೀಕ್ಷಾಸ್ನಾನವನ್ನು ಹೊಂದಿದನು. ವಾಕ್ಯಕ್ಕೆ ವಿಧೇಯನಾದಾಗ, ಪವಿತ್ರಾತ್ಮವು ಆತನ ಮೇಲೆ ಬಂತು. ಮತ್ತು - ಈತನು ಪ್ರೀಯನಾಗಿರುವ ನನ್ನ ಮಗನು ಈತನನ್ನು ಕೇಳಿರಿ ಎಂಬ ವಾಣಿ ಯಾಯಿತು. ಈತನು ಈಗ ನನ್ನ ಮಗನಾದನು, ಎಂದು ಆ ವಾಣಿಯು ಹೇಳಲಿಲ್ಲ. ಯೇಸುವು ಮಗನಾಗಿದ್ದನು. ಅವರೆಲ್ಲರ ಮುಂದೆ ಪವಿತ್ರಾತ್ಮವು ಆತನನ್ನು ಮಗನೆಂದು ಪ್ರತಿಷ್ಠಿಸಿತು. ಮತ್ತು ಈ ರೀತಿಯಲ್ಲಿ ತುಂಬಿಸಲ್ಪಟ್ಟು (ಮತ್ತು ಪಂಚಾಶತ್ತಮ ಮತ್ತು ಆಮೇಲೆ ಎಂದೂ ಅದೇ ಮಾದರಿಯು ಮುಂದುವರಿಯುತ್ತಿದೆ), ಆತನು ಸ್ಪಷ್ಟವಾಗಿ ತೋರಿಸಲ್ಪಟ್ಟ ಶಕ್ತಿಯಿಂದ ಹೋದನು. ದೇವರ ಸಂಪೂರ್ಣ ಪ್ರಕಟನೆಯನ್ನು ಆ ದಿನಕ್ಕಾಗಿ ದೇವರಿಂದ ಹೊಂದಿದನು.

ಈಗ ನಾವು ದೃಢವಾಗಿ, ವಿಶ್ವಾಸಿಯು ತಾನು ಜೀವಿಸುತ್ತಿರುವ ಸಮಯಕ್ಕೋಸ್ಕರವಾದ ದೇವರ ವಾಕ್ಯವನ್ನು ಅಂಗೀಕರಿಸುವದೇ ಅವನು ಪವಿತ್ರಾತ್ಮದಿಂದ ದೀಕ್ಷಾಸ್ನಾನಮಾಡಲ್ಪಟ್ಟಿದ್ದಾನೆಂಬ ನಿಜವಾದ ರುಜುವಾತು ಎಂದು ಹೇಳುತ್ತಾ ಬಂದೆವು. ಈಗ ನಾನು ನಿಮಗೆ (ಇದನ್ನು) ಬಹಳಷ್ಟು ಸ್ಪಷ್ಟವಾಗಿ ತೋರಿಸುವೆನು.

ಪ್ರಕಟನೆ 2 ಮತ್ತು 3ನೇ ಅಧ್ಯಾಯಗಳಲ್ಲಿ ಹೇಳಲ್ಪಟ್ಟ ಏಳು ಸಭಾಕಾಲಗಳು, ಅನ್ಯಜನರ ಸಂಪೂರ್ಣತೆಯ ಪೂರ್ಣ ಅವಧಿಯನ್ನು ಸೂಚಿಸುತ್ತದೆ, ಅಥವಾ ದೇವರು ಅನ್ಯಜನರಿಗೆ ರಕ್ಷಣೆಯನ್ನು ಒದಗಿಸುವದಕ್ಕಾಗಿ ಅವರೊಂದಿಗೆ ಕಾರ್ಯ ಮಾಡುವ ಇಡೀ ಸಮಯವನ್ನು ಸೂಚಿಸುತ್ತದೆ. ಪ್ರತಿಯೊಂದು ಯುಗದಲ್ಲಿ, ಯಾವ ಆಕ್ಷೇಪವಿಲ್ಲದೆ ಪ್ರತೀ ಯುಗಕ್ಕೆ ಸಂದೇಶವನ್ನು ಪ್ರಾರಂಭ ಮತ್ತು ಸಮಾಪ್ತಿಮಾಡುವಾಗ ಅದು ಒಂದೇ ಸಂಗತಿಯನ್ನು ಹೇಳುತ್ತದೆ. ಸಭೆಯ ದೂತನಿಗೆ ಬರೆ,- (ಎಫೆಸ, ಸ್ಮುರ್ನ, ಪೆರ್ಗಮ, ಥುವತ್ಯರ, ಸಾರ್ದಿಸ್, ಫಿಲದೆಲ್ಫಿಯ, ಲವೊದಿಕೀಯ), ಆತನು ಈ ಸಂಗತಿಗಳನ್ನು ಹೇಳುತ್ತಿದ್ದಾನೆ, ಇತ್ಯಾದಿ; ಇತ್ಯಾದಿ;-ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ. (ಏಕ ವಚನ) ಯೇಸುವು (ಆತ್ಮನ ಮೂಲ ಕವಾಗಿ) ಪ್ರತೀ ಯುಗದಲ್ಲಿ ಆ ಯುಗದ ವಾಕ್ಯದ ವಿಷಯವಾಗಿ ತಾನು ಕೇವಲ ಒಂದೇ ಒಂದು ವ್ಯಕ್ತಿಗೆ ಹೇಳುತ್ತಿದ್ದಾನೆ ಎಂಬದನ್ನು ಇಲ್ಲಿ ಲಕ್ಷ್ಯಕ್ಕೆ ತಂದುಕೊಳ್ಳಿರಿ. ಕೇವಲ ಒಬ್ಬನೇ ಸಂದೇಶಗಾರನು ಪ್ರತಿಯೊಂದು ಯುಗದಲ್ಲಿ ಆ ಯುಗಕ್ಕೆ ಆತ್ಮನು ಏನು ಹೇಳುತ್ತಾನೋ ಅದನ್ನು ಅಂಗೀಕರಿಸುತ್ತಾನೆ. ಮತ್ತು ಆ ಒಬ್ಬ ಸಂದೇಶಗಾರನು ಆ ನಿಜ ಸಭೆಗಾಗಿರುವ ಸಂದೇಶಗಾರನು. ಅವನು ದೇವರ ಪರವಾಗಿ ಪ್ರಕಟನೆಯ ಮೂಲಕ ನಿಜವಾದ ಮತ್ತು ಸುಳ್ಳಾದ ಸಭೆಗಳಿಗೆ ಮಾತಾಡುತ್ತಾನೆ. ಮತ್ತು ಆ ಸಂದೇ ಶವು ಎಲ್ಲರಿಗೂ ಕಳುಹಿಸಲ್ಪಡುತ್ತದೆ. ಆದರೆ ಯಾರಾರು ಆ ಸಂದೇಶದ ಪರಿಮಿತಿಯೊಳಗೆ ಬರುತ್ತಾರೋ ಅವರಿಗೆಲ್ಲಾ ಈ ಸಂದೇಶವು ಕಳುಹಿಸಲ್ಪಟ್ಟರೂ ಈ ಸಂದೇಶವು ಕೇವಲ ನಿಶ್ಚಿತವಾದ, ಯೋಗ್ಯವಾದ ಗುಂಪಿನಿಂದ ಒಂದು ನಿಶ್ಚಿತವಾದ ರೀತಿಯಲ್ಲಿ ಮಾತ್ರವೇ ಸ್ವೀಕರಿಸಲ್ಪಡುತ್ತದೆ. ಆ ಗುಂಪಿನ ಪ್ರತೀ ವ್ಯಕ್ತಿಯು, ಆತ್ಮನು ಸಂದೇಶಗಾರನ ಮೂಲಕ ಏನನ್ನು ಹೇಳುತ್ತಾನೋ ಅದನ್ನು ಕೇಳುವ ಸಾಮರ್ಥ್ಯವನ್ನು ಹೊಂದಿಕೊಂಡವ ನಾಗಿರುತ್ತಾನೆ. ಅದನ್ನು ಕೇಳುವವರು, ಅವರ ಸ್ವಂತ ವ್ಯಕ್ತಿಗತವಾದ

ಪ್ರಕಟನೆಯನ್ನು ಹೊಂದಿಕೊಳ್ಳುವದಿಲ್ಲ. ಅಥವಾ ಒಂದು ಗುಂಪು ಅವರ ಸಾಮುದಾಯಿಕ ಪ್ರಕಟನೆಯನ್ನು ಹೊಂದಿಕೊಳ್ಳುವದಿಲ್ಲ, ಆದರೆ ಪ್ರತೀ ವ್ಯಕ್ತಿಯು ಆ ಸಂದೇಶಗಾರನು ಈಗಾಗಲೇ ಯಾವದನ್ನು ದೇವರಿಂದ ಹೊಂದಿದ್ದಾನೋ, ಅದನ್ನೇ ಕೇಳುತ್ತಾನೆ. ಮತ್ತು ಹೊಂದುತ್ತಾನೆ.

ಆದರೆ ಇದು ಹೀಗಿರುವದರಿಂದ ಇದನ್ನು ವಿಚಿತ್ರವೆಂದು ಎಣಿಸಬೇಡಿರಿ. ಯಾಕಂದರೆ ಪೌಲನು ದೇವರ ಹಸ್ತದ ಕೆಳಗೆ ಈ ಮಾದರಿಯನ್ನು ಇಟ್ಟಿದ್ದಾನೆ. ಅವನ ದಿನಕ್ಕಾಗಿ ಕೇವಲ ಪೌಲನು ಮಾತ್ರವೇ ಪೂರ್ಣ ಪ್ರಕಟನೆಯನ್ನು ಹೊಂದಿದ್ದನು. ಇದು ಪೌಲನು ಆ ದಿನದ ಅನ್ಯಜನರ ಸಂದೇಶಗಾರ ಪ್ರವಾದಿಯೆಂದು, ಅವನು ಎದುರಿಸಿದ ಇತರ ಅಪೋಸ್ತಲರು ಒಪ್ಪಿದ್ದರಲ್ಲಿ ರುಜುವಾತಾಗುತ್ತದೆ. ಮತ್ತು ವಾಕ್ಯದಲ್ಲಿರುವ ನಿಜವಾದ ದೃಷ್ಟಾಂತದಿಂದಲೂ ಲಕ್ಷ್ಯವಿಡಿರಿ. ಪೌಲನು ಆಸ್ಯಾ ಸೀಮೆಗೆ ಹೋಗಲು ಇಚ್ಛಿಸಿದಾಗ ದೇವರು ಅವನನ್ನು ತಡೆದನು. ಯಾಕಂದರೆ ಆ ಕುರಿಗಳು (ಆತನ ಮಕ್ಕಳು) ಮಕೆದೋನ್ಯದಲ್ಲಿದ್ದರು. ಮತ್ತು ಅವರು ಪೌಲನ ಮೂಲಕ ಆತ್ಮನು ಏನೇನು ಹೇಳಲಿಚ್ಛಿಸುತ್ತಾನೋ ಅದನ್ನು ಕೇಳುವರು. ಆದರೆ ಆಸ್ಯಾದ ಜನರು ಅದನ್ನು ಕೇಳಲಾರರು.

ಪ್ರತಿ ಯುಗದಲ್ಲಿ ನಮಗೆ ಅದೇ ಮಾದರಿಯು ನೋಡಲು ಸಿಗುತ್ತದೆ. ಈ ಕಾರಣದಿಂದಾಗಿಯೇ, ಒಂದು ನಿಶ್ಚಿತ ಸಮಯದಲ್ಲಿ ದೇವರು ಕಳುಹಿಸಿಕೊಟ್ಟ ಸಂದೇಶಗಾರನ ಮೂಲಕ ಪ್ರಕಾಶವು ಬರುತ್ತದೆ. ಮತ್ತು ಆ ಸಂದೇಶಗಾರನ ಮೂಲಕ ನಂಬಿಗಸ್ತಿಕೆಯಿಂದ ಕಳುಹಿಸಲ್ಪಟ್ಟ ಬೇರೆಯವರ ಸೇವೆಯ ಮೂಲಕ ಅಲ್ಲಿ ಪ್ರಕಾಶವು ಹರಡುತ್ತದೆ. ಆದರೆ ನಿಜವಾಗಿ ಹೊರಬರುವ ಅವರೆಲ್ಲರೂ ಯಾವಾಗಲೂ ಕೇವಲ ಆ ಸಂದೇಶಗಾರನು ಹೇಳಿದ್ದನ್ನೇ ಹೇಳುವಂಥಾದ್ದು ಎಷ್ಟು ಅವಶ್ಯಕವಾಗಿದೆ ಎಂಬದನ್ನು ಕಲಿಯುವದಿಲ್ಲ. (ಪೌಲನು ಆ ಜನರನ್ನು, ತಾನು ಏನು ಹೇಳಿದ್ದೇನೋ ಅದನ್ನೇ ಹೇಳಬೇಕೆಂದು ಎಚ್ಚರಿಸಿದನೆಂದು ನೆನಪಿನಲ್ಲಿಟ್ಟು ಕೊಳ್ಳಿರಿ.) ಒಂದನೇ ಕೊರಿಂಥ 14:37,- *ಯಾವನಾದರೂ ತನ್ನನ್ನು ಪ್ರವಾದಿಯೆಂದಾಗಲಿ ದೇವರಾತ್ಮದಿಂದ ನಡಿಸಲ್ಪಡುವವನೆಂದಾಗಲಿ ಭಾವಿಸಿಕೊಂಡರೆ ನಾನು ನಿಮಗೆ ಬರೆದಿರುವ ಸಂಗತಿಗಳು ಕರ್ತನ ವಿಧಿಯೇ ಎಂದು ಚೆನ್ನಾಗಿ ತಿಳಿದುಕೊಳ್ಳಲಿ. ಏನು ದೇವರ ವಾಕ್ಯವು ನಿಮ್ಮಿಂದಲೇ ಹೊರಟಿತೋ? ಅಥವಾ ನಿಮಗೆ ಮಾತ್ರವೇ ಬಂತೋ?* ಅವರು ಇಲ್ಲಿ

ಕೂಡಿಸುತ್ತಾರೆ ಅಥವಾ ಅಲ್ಲಿ ತೆಗೆಯುತ್ತಾರೆ. ಮತ್ತು ಬಹಳ ಸ್ವಲ್ಪ ಸಮಯದಲ್ಲಿಯೇ ಸಂದೇಶವು ಇನ್ನೆಂದೂ ಶುದ್ಧವಾಗಿರುವದಿಲ್ಲ. ಮತ್ತು ಭಕ್ತಿ ಸಂಜೀವನವು ಸಾಯುತ್ತದೆ. ಒಂದೇ ವಾಣಿಯನ್ನು ಕೇಳಲು ನಾವು ಎಷ್ಟು ಜಾಗರಾಕರಾಗಿರಬೇಕು. ಯಾಕಂದರೆ ಆತ್ಮವು ಕೇವಲ ಒಂದೇ ಸ್ವರವನ್ನು ಹೊಂದಿದೆ ಅದುವೇ ದೇವರ ವಾಣಿಯಾಗಿದೆ. ಪೌಲನು ತಾನು ಹೇಳಿದ್ದನ್ನೇ ಹೇಳಲು ಅವರಿಗೆ ಎಚ್ಚರಿಸಿದನು, ಹಾಗೆಯೇ ಪೇತ್ರನೂ ಮಾಡಿದನು. ಅವನು ಸಹ (ಪೌಲನು) ತಾನು ಪ್ರಕಟನೆಯ ಮೂಲಕ ಏನನ್ನು ಹೇಳಿದ್ದಾನೋ ಅದರ ಒಂದು ಶಬ್ದವನ್ನಾದರೂ ಬದಲಾಯಿಸ ಶಕ್ತನಲ್ಲ ಎಂದು ಅವರನ್ನು ಎಚ್ಚರಿಸಿದ್ದನು. ಓ ಆತನ ಸಂದೇಶಗಾರನ ಮೂಲಕ ದೇವರ ವಾಣಿಯನ್ನು ಕೇಳುವಂಥಾದ್ದು ಎಷ್ಟು ಪ್ರಾಮುಖ್ಯವಾಗಿದೆ. ಮತ್ತು ಅವರಿಗೆ ಕೊಡಲ್ಪಟ್ಟದ್ದನ್ನು ಸಭೆಗೆ ಕೊಡುವಂಥದ್ದೂ ಎಷ್ಟು ಪ್ರಾಮುಖ್ಯವಾಗಿದೆ.

ನೀವು ಈಗ ಇದನ್ನು ಅರ್ಥಮಾಡಿಕೊಂಡಿರೆಂದು ನಾನು ನಿರೀಕ್ಷಿಸುತ್ತೇನೆ. ಮೂಲ ಭೂತವಾದಿಗಳು ಮತ್ತು ಪೆಂಟಕೋಸ್ಟ್‌ನವರೊಂದಿಗೆ ನಾನು ಯಾಕೆ ಒಪ್ಪುವದಿಲ್ಲವೆಂದು ನೀವು ಈಗ ಪ್ರಾಯಶಃ ತಿಳಿದುಕೊಳ್ಳಬಹುದು. ಕರ್ತನು ಯಾವರೀತಿ ವಾಕ್ಯವನ್ನು ನನಗೆ ಪ್ರಕಟಿಸಿದ್ದಾನೋ, ನಾನು ಅದನ್ನೇ ಕಾಪಾಡಿಕೊಳ್ಳಬೇಕು. ಈಗ ನಾನು ಅದೆಲ್ಲವನ್ನು ಪೂರ್ತಿಗೊಳಿಸಲಿಲ್ಲ. ಅದು ಒಂದು ಬೇರೆ ಪುಸ್ತಕವೇ ಆದೀತು. ಆದರೆ ಕರ್ತನ ಸಹಾಯದಿಂದ ನಮಗೆ ಅನೇಕ ಪ್ರಸಂಗಗಳು ಮತ್ತು ಟೇಪುಗಳು ಮತ್ತು ಸಂದೇಶಗಳು- ಇವೆಲ್ಲಾ ವಿಷಯಗಳ ಮೇಲೆ ದೊರೆಯುವವು. ಇದು ನಿಮಗೆ ತಿಳಿದುಕೊಳ್ಳಲು ಮತ್ತು ಎಲ್ಲಾ ವಚನಗಳನ್ನು ಒಂದಕ್ಕೊಂದು ಜೋಡಿಸಲು ನಿಮಗೆ ಸಹಾಯಮಾಡುವವು.

ದೇವರಾತ್ಮನು ಪ್ರತಿ ಯುಗದ ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ. ಪ್ರತಿಯುಗದಲ್ಲೂ ಅದು ಅದೇ ಕೂಗಾಗಿತ್ತು. ಆತ್ಮನು ಹೇಳುವದನ್ನು ಕೇಳಿರಿ. ನೀನು ಕ್ರೈಸ್ತನಾಗಿದ್ದರೆ, ಆತ್ಮನು ಕಲಿಸುವದಕ್ಕೆ ನೀನು ಹಿಂದೆ ಬರುವಿ, ಅಂದರೆ ಈ ಸಮಯದ ವಾಕ್ಯಕ್ಕೆ. ಪ್ರತೀ ಯುಗದ ಪ್ರತೀ ಸಂದೇಶಗಾರನು ವಾಕ್ಯವನ್ನು ಬೋಧಿಸುವನು. ಮನುಷ್ಯರು ಅವರ ಸಮಯದ ವಾಕ್ಯಕ್ಕೆ ಹಿಂದೆ ಹೋಗುವದರಿಂದ ಪ್ರತೀ ಹೊಸ ಮತ್ತು ನಿಜವಾದ ಭಕ್ತಿ ಸಂಜೀವನವು ಬರುತ್ತದೆ. ಪ್ರತಿ ಯುಗದ ಕೂಗು ಏನೆಂದರೆ- ನೀನು ದೇವರ ವಾಕ್ಯವನ್ನು ಬಿಟ್ಟು ಬಿಟ್ಟಿದ್ದೀ, ಮಾನಸಾಂತರ ಪಟ್ಟು ದೇವರ ವಾಕ್ಯದ ಕಡೆಗೆ ಹಿಂದೆ ಬಾ, ಎಂಬ

ಗದರಿಕೆಯಾಗಿದೆ. ಸತ್ಯವೇದದ ಮೊದಲನೆಯ ಪುಸ್ತಕದಿಂದ (ಆದಿಕಾಂಡ) ಕಡೇ ಪುಸ್ತಕ (ಪ್ರಕಟನೆ)ದವರೆಗೆ ದೇವರ ಕೋಪಕ್ಕೆ ಅಲ್ಲಿ ಒಂದೇ ಒಂದು ಕಾರಣವಿದೆ: ವಾಕ್ಯವನ್ನು ಬಿಟ್ಟು ಹೋಗುವದು. ಮತ್ತು ಆತನ ಪ್ರೀತಿಯನ್ನು ಹಿಂದೆ ಪಡಕೊಳ್ಳಲು ಅಲ್ಲಿ ಒಂದೇ ಒಂದು ಪರಿಹಾರವಿದೆ: ವಾಕ್ಯಕ್ಕೆ ಹಿಂದೆ ಬರುವದು.

ಎಫೆಸ ಸಭೆಯ ಯುಗದಲ್ಲಿ ಮತ್ತು ಈ ಯುಗದಲ್ಲಿ ಮತ್ತು ಮುಂದೆ ಬರುವ ಪ್ರತಿಯೊಂದು ಯುಗದಲ್ಲಿ ಇದು ಸತ್ಯವೆಂದು ನಾವು ನೋಡುವೆವು ಎಂದು ನಾವು ನಿರೀಕ್ಷಿಸುತ್ತೇವೆ. ಮತ್ತು ನಮ್ಮ ಯುಗವಾದ ಕಡೆಯ ಯುಗದಲ್ಲಿ ನಾವು ವಚನದ ನಂದಿಹೋಗುವಿಕೆಯನ್ನು ಕಂಡುಕೊಳ್ಳುತ್ತೇವೆ. ಮತ್ತು ಸಂಪೂರ್ಣ ವಚನ ಭ್ರಷ್ಟತೆಯು ಮಹಾ ಸಂಕಟದೊಳಗೆ ಅಂತ್ಯಗೊಳ್ಳುವದು. ನೀನು ನಿಜವಾದ ಬೀಜವಾಗಿದ್ದರೆ, ನೀನು ನಿಜವಾಗಿ ಪವಿತ್ರಾತ್ಮದ ದೀಕ್ಷಾಸ್ನಾನವನ್ನು ಹೊಂದಿದ್ದರೆ, ನೀನು ಆತನ ವಚನವನ್ನು ನಿನಗೆ ಅವಶ್ಯವಾಗಿರುವ ಆಹಾರಕ್ಕಿಂತಲೂ ಹೆಚ್ಚಾಗಿ ಗೌರವಿಸುವಿ. ಮತ್ತು ದೇವರ ಬಾಯಿಂದ ಹೊರಡುವ ಪ್ರತೀ ವಾಕ್ಯಕ್ಕೆ ಅನುಸಾರವಾಗಿ ಜೀವಿಸಲು ತವಕಪಡುವಿ. ಈ ದಿನದಲ್ಲಿ ಆತ್ಮನು ದೇವರ ವಾಕ್ಯದಿಂದ ನಮಗೆ ಏನನ್ನು ತರುತ್ತಿದ್ದಾನೋ ಅದನ್ನು ನಾವು ಕೇಳುವಂತಾಗಲಿ ಎಂಬುದೇ ಎಲ್ಲರಿಗೋಸ್ಕರವಾಗಿರುವ ನನ್ನ ಮನಪೂರ್ವಕವಾದ ಪ್ರಾರ್ಥನೆಯಾಗಿದೆ.


ಪುಸ್ತಕಗಳಿಗಾಗಿ ಸಂಪರ್ಕಿಸಿರಿ

ಎಸ್. ಡ್ಯಾನಿಯೆಲ್ ಸಂಪತ್ ಕುಮಾರ್

ತಿರುನಿಲ್ಲೈ ಕಾಲೋನಿ ನಂ. 147,

ವಿಚ್ಚುರ್. ಪೋಸ್ಟ್

ಚನ್ನೈ . ಪಿನ್. 600103



*for books contact :*

**S.DANIEL SAMPATH KUMAR**

*No. 147, Thirunilai colony ,*

*vichoor post , chennai - 600 103*

*E-Mail : sdanielsampathkumar@gmail.com*

*Website : danielendtimebooksministry.org*

*Phone No :* 99419 74213 , 96001 71260